2017 ಕ.ತೀ.ವ. 246

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅರವಿಂದ್ ಕುಮಾರ್

**ಪಿಎಫ್‌ಸಿಒ 2916 ಐಎನ್‌ಸಿ –ವಿರುದ್ಧ– ಕಿಂಗ್‌ಫಿಷರ್ ಏರ್‌ಲೈನ್ಸ್ ಲಿಮಿಟೆಡ್***

ಭಾರತ ಸಂವಿಧಾನ ಅನುಚ್ಛೇದ 227ರಡಿಯಲ್ಲಿ ರಿಟ್ ಅರ್ಜಿ.

ರಿಟ್ ಅರ್ಜಿದಾರರು ಎದುರುದಾರರ ವಿರುದ್ಧ ಡಿಕ್ರಿಯನ್ನು ಜಾರಿಗೊಳಿಸುವ ಸಲುವಾಗಿ ಒಂದೇ ವಹಿವಾಟಿಗೆ ಸಂಬಂಧಿಸಿದಂತೆ ಎರಡು ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಹೀಗಾಗಿ ಜಾರೀ ನ್ಯಾಯಾಲಯವು ಡಿಕ್ರಿ ಮೌಲ್ಯವನ್ನು ಮೀರಿ ಎರಡೆರೆಡು ಅರ್ಜಿಯನ್ನು ಒಂದೇ ವಹಿವಾಟಿಗೆ ಸಂಬಂಧಿಸಿದಂತೆ ಸಲ್ಲಿಸುವ ಅರ್ಜಿಯು ಊರ್ಜಿತವಲ್ಲವೆಂದು ಆದೇಶಿಸುತ್ತದೆ. ಆ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿಗಳು.

ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 21 ಕ್ರಮಾದೇಶ 11ರಡಿಯಲ್ಲಿ ಡಿಕ್ರಿಧಾರಕನು ಬೇರೆ ಬೇರೆ ತೀರ್ಪುಋಣಿಗಳ ವಿರುದ್ಧ ಡಿಕ್ರಿಯನ್ನು ಜಾರಿ ಮಾಡಲು ಒಟ್ಟೊಟ್ಟಿಗೆ ಹಾಕಲು ಅವಕಾಶವಿರುತ್ತದೆ. ಈ ಕಾರಣದಿಂದ ಜಾರೀ ನ್ಯಾಯಾಲಯದ ಆದೇಶವು ಸಮಂಜಸವಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಗಳನ್ನು ಪುರಸ್ಕರಿಸಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

1. *(1994) 1 ಎಸ್‌ಸಿಸಿ 1 : ಎಐಆರ್ 1994 ಎಸ್‌ಸಿ 853 ಎಸ್.ಪಿ. ಚೆಂಗಲ್ವರಾಯ ನಾಯ್ಡು (ಮೃತರಾಗಿರುತ್ತಾರೆ)ರವರ ಕಾನೂನು ಸಮ್ಮತ ವಾರಸುದಾರರು –ವಿರುದ್ಧ– ಜಗನ್ನಾಥ್ (ಮೃತರಾಗಿರುತ್ತಾರೆ) ರವರ ಕಾನೂನು ಸಮ್ಮತ ವಾರಸುದಾರರು* *(ಉಲ್ಲೇ) 5*

* ರಿಟ್ ಅರ್ಜಿ ಸಂಖ್ಯೆ.: 32300 ಮತ್ತು 32399/2015, ದಿನಾಂಕ: 29ನೇ ಏಪ್ರಿಲ್, 2016

2. *ಎಐಆರ್ 1940 ಬಾಂಬೆ 247*
*ಜಗನ್ನಾಥ್ ಗಣೇಶ್‌ರಾಮ್ ಅಗರ್‌ವಾಲ –ವಿರುದ್ಧ–*
*ಶಿವ್‌ನಾರಾಯಣ್ ಭಗೀರಥ್ ಮತ್ತು ಇತರರು* *(ಉಲ್ಲೇ) 5*

3. *ಎಐಆರ್ 1977 ಕೆಎಆರ್ 204*
*ದಿ ಹುಕುಮ್‌ಚಂದ್ ಇನ್ಸುರೆನ್ಸ್ ಕಂ.ಲಿ. –ವಿರುದ್ಧ–*
*ದಿ ಬ್ಯಾಂಕ್ ಆಫ್ ಬರೋಡ ಮತ್ತು ಇತರರು* *(ಉಲ್ಲೇ) 5*

4. *ಎಐಆರ್ 1961 ಎಪಿ 63*
*ವೆಥಿಯಾವೆಂಕನ್ನ –ವಿರುದ್ಧ– ಸೇಠ್ ಚುನಿಲಾಲ್*
*ಮೂಲ್ ಚಂದ್ ರಿಜಿಸ್ಟರ್ಡ್ ಫರ್ಮ್, ಕಾಕಿವಡ,*
*ಮ್ಯಾನೇಜಿಂಗ್ ಪಾರ್ಟನರ್, ಚುನಿಲಾಲ್* *(ಉಲ್ಲೇ) 5*

5. *2003ರ ಎಸ್‌ಸಿಸಿ ಆನ್‌ಲೈನ್ ಎಪಿ 659*
*ವೆಂಕಟೇಶ್ವರ ರಾವ್ ಮತ್ತು ಇತರರು –ವಿರುದ್ಧ–*
*ಮಾರ್ಗದರ್ಶಿ ಚಿಟ್ ಫಂಡ್ಸ್ ಲಿ.*
*ಮತ್ತು ಮತ್ತೊಬ್ಬರು* *(ಉಲ್ಲೇ) 5*

6. *1999 ಎಸ್‌ಸಿಸಿ ಆನ್‌ಲೈನ್ ಮದ್ರಾಸ್ 710*
*ಡಾ|| ವಿಮಲ –ವಿರುದ್ಧ– ಮೆ|| ಶ್ರೀರಾಮ ಚಿಟ್ಸ್ ಅಂಡ್*
*ಇನ್‌ವೆಸ್ಟ್‌ಮೆಂಟ್ಸ್ ಪ್ರೈ.ಲಿ.* *(ಉಲ್ಲೇ) 5*

7. *(2015)5 ಎಸ್‌ಸಿಸಿ 423*
*ರಾಧೈ ಶ್ಯಾಂ ಮತ್ತು ಮತ್ತೊಬ್ಬರು –ವಿರುದ್ಧ–*
*ಛಬಿ ನಾಥ್ ಮತ್ತು ಇತರರು* *(ಉಲ್ಲೇ) 13*

8. *2002(1) ಸಿಟಿಸಿ 48*
*ರಾಮ್ ನಾರಾಯಣ್ ಬಟದೆ –ವಿರುದ್ಧ–*
*ವಿಮಲಾ ಜಾವರ್ ಮತ್ತು ಇತರೆ ಆರು ಜನರು* *(ಉಲ್ಲೇ) 17*

ಅರ್ಜಿದಾರರ ಪರ : ಶ್ರೀ ಕೆವಿಕ್ ಸೆಟಲ್ವಾಡ್, ಇವರೊಂದಿಗೆ ಶ್ರೀ ಶ್ರೀರಂಗ ಎಸ್. ವಕೀಲರು ;

ಪ್ರತ್ಯರ್ಜಿದಾರರ ಪರ : ಶ್ರೀ ರಾಜೇಶ್ ಎಸ್.ವಿ. ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಅರವಿಂದ್ ಕುಮಾರ್ :**

ಈ ಎಲ್ಲಾ ರಿಟ್ ಅರ್ಜಿಗಳು, ಸಂಯುಕ್ತ ರಾಷ್ಟ್ರದ ನ್ಯಾಯಾಲಯದಲ್ಲಿನ ಡಿಕ್ರಿ ಧಾರಕರು ಪಡೆದ ಡಿಕ್ರಿಗಳ ಜಾರಿಗೆ ಸಂಬಂಧಿಸಿದವಾಗಿವೆ. ಅವುಗಳು ಒಂದೇ ರೀತಿಯ ವಾಸ್ತವಾಂಶಗಳು ಹಾಗೂ ಕಾನೂನನ್ನು ಒಳಗೊಂಡಿರುವುದರಿಂದ, ಅವುಗಳನ್ನು ಸುನಾವಣೆ ಮಾಡಲಾಗಿದೆ ಮತ್ತು ಸದರಿ ಸಾಮಾನ್ಯ ಆದೇಶದ ಮೂಲಕ ವಿಲೆ ಮಾಡಲಾಗಿರುತ್ತದೆ.

ಈ ರಿಟ್ ಅರ್ಜಿಗಳನ್ನು ದಾಖಲಿಸಲು ಕಾರಣವಾದಂಥ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ:

**ರಿಟ್ ಅರ್ಜಿ ಸಂ.32399/2015 ಮತ್ತು 32403/2015**

ಹೈಕೋರ್ಟ್ ಆಫ್ ಜಸ್ಟೀಸ್, ಕ್ವೀನ್ಸ್ ಬೆಂಚ್ ಡಿವಿಜನ್, ಕಮರ್ಷಿಯಲ್ ಕೋರ್ಟ್, ರಾಯಲ್ ಕೋರ್ಟ್ ಆಫ್ ಜಸ್ಟೀಸ್, ಇವರಿಂದ ದಿನಾಂಕ 13.12.2013ರಂದು ಪ್ರತ್ಯರ್ಜಿದಾರ – ತೀರ್ಪು ಋಣಿಗಳ ವಿರುದ್ಧ ತೀರ್ಪು ಹಾಗೂ ಡಿಕ್ರಿಯನ್ನು ಪಡೆದಿದ್ದಂಥ ಈ ಎರಡೂ ರಿಟ್ ಅರ್ಜಿಗಳಲ್ಲಿನ ಡಿಕ್ರಿ ಧಾರಕರಿಂದ, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು ಇಲ್ಲಿ ಎರಡು ಜಾರಿ ಅರ್ಜಿಗಳನ್ನು ಅಂದರೆ ಜಾರಿ ಅರ್ಜಿ ಸಂಖ್ಯೆ:1267/2014 ಮತ್ತು 1274/2014ನ್ನು ಸಲ್ಲಿಸಲಾಗಿರುತ್ತದೆ. ಮೂಲ ತೀರ್ಪು ಮತ್ತು ಡಿಕ್ರಿಗಳನ್ನು, ಜಾರಿ ಅರ್ಜಿಗಳ ಇತ್ಯರ್ಥದ ಅವಧಿಯಲ್ಲಿ ಮಾರ್ಪಾಡುಗೊಳಿಸಬೇಕಾಗುತ್ತದೆ. ಹಾಗಾಗಿ, ತಿದ್ದುಪಡಿಗೆ

ಸಂಬಂಧಿಸಿದ ಅರ್ಜಿಗಳನ್ನು, ಸಂಬಂಧಪಟ್ಟ ಜಾರಿ ಅರ್ಜಿಗಳಲ್ಲಿ ನಮೂದಿಸಿದ ಮೊಬಲಗನ್ನು ತಿದ್ದುಪಡಿ ಮಾಡಲು ಅಂದರೆ, ತಿದ್ದುಪಡಿಗೆ ಸಂಬಂಧಿಸಿದಂತೆ ಕೋರಿದ ಈ ಎರಡೂ ಜಾರಿ ಅರ್ಜಿಗಳಲ್ಲಿ ಸಲ್ಲಿಸಬೇಕಾಗಿರುತ್ತದೆ. ಜಾರಿ ಅರ್ಜಿಗಳ ತಿದ್ದುಪಡಿಗೆ ಸಂಬಂಧಿಸಿದ ಅರ್ಜಿಗಳನ್ನು ಇಬ್ಬರೂ ತೀರ್ಪು ಋಣಿಗಳು ವಿರೋಧಿಸಬೇಕಾಗಿರುತ್ತದೆ. ಈ ತಿದ್ದುಪಡಿ ಅರ್ಜಿಗಳ ಸುನಾವಣೆಯ ಸಮಯದಲ್ಲಿ, ಜಾರಿ ನ್ಯಾಯಾಲಯವೇ ಸ್ವತಃ ಈ ಜಾರಿ ಅರ್ಜಿಗಳ ಅಂದರೆ ಕಿಂಗ್ ಫಿಷರ್ ಏರ್‌ಲೈನ್ಸ್ ಲಿಮಿಟೆಡ್ ಮತ್ತು ಯುನೈಟೆಡ್ ಬ್ರಿವರೀಸ್ (ಹೋಲ್ಡಿಂಗ್ಸ್) ಲಿಮಿಟೆಡ್‌ಗಳ ವಿರುದ್ಧ ಹೊರಡಿಸಿರುವ ತೀರ್ಪು ಹಾಗೂ ಡಿಕ್ರಿಗಳು ಒಂದೇ ರೀತಿ ಇರುವುದರಿಂದ ಜಾರಿ ಅರ್ಜಿ ಸಂ.1267/2014 ಮತ್ತು 1274/2014ನ್ನು ಅವುಗಳ ಊರ್ಜಿತತ್ವದ ವಿಷಯವನ್ನು ಪ್ರಸ್ತಾಪಿಸಲಾಗಿರುತ್ತದೆ. ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ ತರುವಾಯ, ಪ್ರಶ್ನಿತ ಆದೇಶಗಳ ಮೂಲಕ ಜಾರಿ ನ್ಯಾಯಾಲಯವು ಜಾರಿ ಅರ್ಜಿ ಸಂ.1267/2014 ಮತ್ತು 1274/2014ರಳೆರಡರಲ್ಲೂ ಕ್ಲೇಮು ಮಾಡಿದ ಮೊಬಲಗು ಒಂದೇ ಮೊತ್ತವಾಗಿದ್ದು, ಡಿಕ್ರಿ ಧಾರಕರು ಎರಡು ಜಾರಿ ಅರ್ಜಿಗಳನ್ನು ಅಂದರೆ 1268/2014 ಮತ್ತು 1276/2014ಗಳನ್ನು ಸಲ್ಲಿಸಿದ್ದು, ಇದು ಸದರಿ ವ್ಯವಹರಣೆಗೆ ಸಂಬಂಧಿಸಿದ್ದು, ಡಿಕ್ರಿ ಮೊಬಲಗನ್ನು ಎರಡುಪಟ್ಟು ವಸೂಲಿ ಮಾಡುವ ಉದ್ದೇಶದೊಂದಿಗೆ ಡಿಕ್ರಿ ಧಾರಕರು, ಜಾರಿ ಅರ್ಜಿ ಸಂ.1267/2014 ಮತ್ತು 1274/2014ನ್ನು ತಿದ್ದುಪಡಿ ಮಾಡಲು ಡಿಕ್ರಿಧಾರಕರು ನಿರ್ದೇಶಿತರಾಗಿರುತ್ತಾರೆ. ಇದರಿಂದ ಎರಡೂ ಅರ್ಜಿಗಳಲ್ಲಿನ ಇದರ ಕ್ಲೇಮು ಎರಡು(2) ಪ್ರತ್ಯೇಕ ಡಿಕ್ರಿಗಳನ್ನು ಪಡೆದಂಥ ಡಿಕ್ರಿಧಾರಕರಲ್ಲಿನ ವ್ಯವಹರಣೆಯಡಿಯಲ್ಲಿ, ಡಿಕ್ರಿಧಾರಕರಿಗೆ ಬರಬೇಕಾದ ಬಾಕಿ ಮೊಬಲಗನ್ನು ಮೀರತಕ್ಕದ್ದಲ್ಲವೆಂದು ಅಭಿಪ್ರಾಯಪಡಲಾಗಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಎರಡೂ ಜಾರಿ ಅರ್ಜಿಗಳು ಅಂದರೆ ಜಾರಿ ಅರ್ಜಿ ಸಂಖ್ಯೆ 1267/2014 ಮತ್ತು 1274/2014ಗಳು ಊರ್ಜಿತವಾಗಿರುತ್ತವೆಂದೂ ಅಭಿಪ್ರಾಯಪಡಲಾಗಿದ್ದರೂ, ಡಿಕ್ರಿಗಳಡಿಯಲ್ಲಿ ನಿಗದಿಪಡಿಸಿದ ಜಂಟಿ ಹಾಗೂ ಪ್ರತ್ಯೇಕ ಬದ್ಧತೆಗೆ ಪ್ರತಿಯಾಗಿ ಡಿಕ್ರಿಧಾರಕರು ತಮ್ಮ ಕೋರಿಕೆಯನ್ನು ನಿರ್ಬಂಧಿಸಿಕೊಳ್ಳಬೇಕಾಗುತ್ತದೆಂದು ಅಭಿಪ್ರಾಯಪಡಲಾಗಿರುತ್ತದೆ.

**ರಿಟ್ ಅರ್ಜಿ ಸಂ.32400/2015 ಮತ್ತು 32405/2015 :**

3. ಹೈಕೋರ್ಟ್ ಆಫ್ ಜಸ್ಟೀಸ್, ಕ್ವೀನ್ಸ್ ಬೆಂಚ್ ಡಿವಿಜನ್, ಕಮರ್ಷಿಯಲ್ ಕೋರ್ಟ್, ರಾಯಲ್ ಕೋರ್ಟ್ ಆಫ್ ಜಸ್ಟೀಸ್‌ನಿಂದ ದಿನಾಂಕ: 13.12.2013ರಂದು ಪ್ರತ್ಯರ್ಜಿದಾರರು ತೀರ್ಪು ಋಣಿಗಳ ವಿರುದ್ಧ ತೀರ್ಪು ಹಾಗೂ ಡಿಕ್ರಿಯನ್ನು ಪಡೆದಂಥ ಎರಡು ರಿಟ್ ಅರ್ಜಿಗಳಡಿಯಲ್ಲಿನ ಡಿಕ್ರಿದಾರಕರು, ಎರಡು ಜಾರಿ ಅರ್ಜಿಗಳನ್ನು ಅಂದರೆ ಜಾರಿ ಅರ್ಜಿ ಸಂಖ್ಯೆ 1268/2014 ಮತ್ತು ಜಾರಿ ಅರ್ಜಿ ಸಂ.1276/2014ಗಳನ್ನು ಕಿಂಗ್ ಫಿಷರ್ ಏರ್‌ಲೈನ್ಸ್ ಲಿಮಿಟೆಡ್ ಮತ್ತು ಯುನೈಟೆಡ್ ಬ್ರಿವರೀಸ್ ಹೋಲ್ಡಿಂಗ್ಸ್ ಲಿಮಿಟೆಡ್ ವಿರುದ್ಧ ಸಲ್ಲಿಸಿರುತ್ತಾರೆ. ಮೂಲ ತೀರ್ಪು ಹಾಗೂ ಡಿಕ್ರಿಗಳನ್ನು ಜಾರಿ ಅರ್ಜಿಗಳ ಇತ್ಯರ್ಥದ ಅವಧಿಯಲ್ಲಿ ಮಾರ್ಪಾಟುಗೊಳಿಸಬೇಕಾಗಿರುತ್ತದೆ. ಹಾಗಾಗಿ, ತಿದ್ದುಪಡಿ ಕೋರಿ ಅಂದರೆ ಸಂಬಂಧಪಟ್ಟ ಜಾರಿ ಅರ್ಜಿಗಳಲ್ಲಿ ನಮೂದಿಸಿರುವ ಮೊಬಲಗನ್ನು ತಿದ್ದುಪಡಿ ಮಾಡಲು ಈ ಎರಡೂ ಜಾರಿ ಅರ್ಜಿಗಳಲ್ಲಿ ತಿದ್ದುಪಡಿಗೆ ಸಂಬಂಧಿಸಿದ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ. ಜಾರಿ ಅರ್ಜಿಗಳ ತಿದ್ದುಪಡಿ ಅರ್ಜಿಗಳನ್ನು ಇಬ್ಬರೂ ತೀರ್ಪು ಋಣಿಗಳು ವಿರೋಧಿಸಿರುತ್ತಾರೆ. ಈ ತಿದ್ದುಪಡಿ ಅರ್ಜಿಗಳ ಸುನಾವಣೆಯ ಸಮಯದಲ್ಲಿ ಇಬ್ಬರ ತೀರ್ಪು ಋಣಿಗಳ ವಿರುದ್ಧ ಹೊರಡಿಸಿರುವ ತೀರ್ಪು ಮತ್ತು ಡಿಕ್ರಿಗಳು ಒಂದೇ ರೀತಿ ಇರುವುದರಿಂದ ಜಾರಿ ನ್ಯಾಯಾಲಯವು ಸ್ವತಃ ಈ ಜಾರಿ ಅರ್ಜಿಗಳು ಅಂದರೆ ಜಾರಿ ಅರ್ಜಿ ಸಂ.1268/2014 ಮತ್ತು 1276/2014ಗಳ ಊರ್ಜಿತತ್ವದ ವಿಷಯವನ್ನು ಪ್ರಸ್ತಾಪಿಸಿರುತ್ತದೆ. ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರನ್ನು ಸುನಾವಣೆ ಮಾಡಿದ ತರುವಾಯ, ಪ್ರಶ್ನಿತ ಆದೇಶಗಳ ಮೂಲಕ ಜಾರಿ ನ್ಯಾಯಾಲಯವು, ಜಾರಿ ಅರ್ಜಿ ಸಂ.1268/2014 ಮತ್ತು 1276/2014 ಇವೆರಡೂ ಅರ್ಜಿಗಳಲ್ಲಿ ಒಂದೇ ರೀತಿ ಇದ್ದು ಒಂದೇ ಮೊಬಲಗನ್ನು ಕ್ಲೇಮು ಮಾಡಿದ್ದು ಡಿಕ್ರಿಧಾರಕನು ಎರಡು ಜಾರಿ ಅರ್ಜಿಗಳನ್ನು ಅಂದರೆ ಸಂ.1267/2014 ಮತ್ತು 1274/2014ನ್ನು ಸಲ್ಲಿಸಿದ್ದು, ಇವು, ಒಂದೇ ವ್ಯವಹರಣೆಗೆ ಸಂಬಂಧಿಸಿದ್ದವಾಗಿರುತ್ತವೆ. ಆಜ್ಞಪ್ತಿಯ ಮೊಬಲಗಿನ ಎರಡರಷ್ಟು ವಸೂಲಿ ಮಾಡುವ ಉದ್ದೇಶದೊಂದಿಗೆ ಡಿಕ್ರಿಧಾರಕನು, ಜಾರಿ ಅರ್ಜಿ ಸಂ.1268/2014 ಮತ್ತು 1276/2014ನ್ನು

ತಿದ್ದುಪಡಿ ಮಾಡಲು ನಿರ್ದೇಶಿತನಾಗಿದ್ದು, ಇದರಿಂದ, ಎರಡೂ ಅರ್ಜಿಗಳಲ್ಲಿನ ಇದರ ಕ್ಲೇಮು, ಡಿಕ್ರಿಧಾರಕನು ಎರಡು (2) ಪ್ರತ್ಯೇಕ ಡಿಕ್ರಿಗಳನ್ನು ಪಡೆದಲ್ಲಿನ ವ್ಯವಹರಣೆಯಡಿಯಲ್ಲಿ ಡಿಕ್ರಿಧಾರಕನಿಗೆ ಬಾಕಿಯಿರುವ ಮೊಬಲಗು ಮೀರತಕ್ಕದ್ದಲ್ಲವೆಂದು ಅಭಿಪ್ರಾಯಪಡಲಾಗಿರುತ್ತದೆ. ಮತ್ತೊಂದು ರೀತಿಯಲ್ಲಿ, ಎರಡು ಜಾರಿ ಅರ್ಜಿಗಳು ಅಂದರೆ ಜಾರಿ ಅರ್ಜಿ ಸಂ.1267/2014 ಮತ್ತು 1274/2014 ಊರ್ಜಿತವಾಗಿರುತ್ತವೆಂದು ಇದು ಅಭಿಪ್ರಾಯಪಟ್ಟಿದ್ದಾಗ್ಯೂ, ಡಿಕ್ರಿಗಳ ಅಡಿಯಲ್ಲಿ ಜಂಟಿಯಾಗಿ ಹಾಗೂ ಪ್ರತ್ಯೇಕವಾಗಿ ಬದ್ಧತೆಯನ್ನು ನಿಗದಿಗೊಳಿಸಿದ್ದಕ್ಕೆ ಪ್ರತಿಯಾಗಿ ಡಿಕ್ರಿಧಾರಕರು ಅವರ ಕೋರಿಕೆಯನ್ನು ನಿರ್ಬಂಧಗೊಳಿಸಲಾಗಿದೆಯೆಂದು ಅಭಿಪ್ರಾಯಪಡಲಾಗಿರುತ್ತದೆ.

**ರಿಟ್ ಅರ್ಜಿ ಸಂ.32401/2015 ಮತ್ತು 32402/2015 ಮತ್ತು ರಿಟ್ ಅರ್ಜಿ ಸಂ. 32404/2015:**

4. ಈ ಮೂರು ರಿಟ್ ಅರ್ಜಿಗಳಲ್ಲಿನ ಡಿಕ್ರಿಧಾರಕರುಗಳು ದಿನಾಂಕ: 13.12.2013ರಂದು ಹೈಕೋರ್ಟ್ ಆಫ್ ಜಸ್ಟೀಸ್ ಕ್ವೀನ್ಸ್ ಬೆಂಚ್ ಡಿವಿಜನ್, ಕಮರ್ಷಿಯಲ್ ಕೋರ್ಟ್, ರಾಯಲ್ ಕೋರ್ಟ್ ಆಫ್ ಜಸ್ಟೀಸ್ ನಿಂದ ಅವರುಗಳು ಪಡೆದ ತೀರ್ಪು ಹಾಗೂ ಡಿಕ್ರಿಗಳ ಫಲವನ್ನು ಅನುಭವಿಸಲು ಮೂರು (3) ಜಾರಿ ಅರ್ಜಿ ಸಂಖ್ಯೆ: 1272/2014, 1273/2014 ಮತ್ತು 1275/2014ಗಳನ್ನು ಸಲ್ಲಿಸಿರುತ್ತಾರೆ. ಸದರಿ ತೀರ್ಪು ಹಾಗೂ ಡಿಕ್ರಿಗಳನ್ನು ಮೂಲತಃ ಹೊರಡಿಸಿದಂಥ ನ್ಯಾಯಾಲಯವು ಮಾರ್ಪಾಟುಗೊಳಿಸಬೇಕಾಗಿರುತ್ತದೆ. ಹಾಗಾಗಿ, ಇತರೆ ವಿಷಯಗಳೊಂದಿಗೆ ಇದು ತರುವಾಯದ ಘಟನೆಯೆಂದು ವಾದಿಸಿ ಈ ಮೂರು (3) ಜಾರಿ ಅರ್ಜಿಗಳಲ್ಲಿನ ಡಿಕ್ರಿಧಾರಕರು, ಜಾರಿ ಅರ್ಜಿಗಳನ್ನು ಅಂದರೆ, ಇತ್ಯರ್ಥದಲ್ಲಿರುವ ಜಾರಿ ಅರ್ಜಿಗಳಲ್ಲಿ ಮಾರ್ಪಾಡಿತ ಡಿಕ್ರಿ ಮೊಬಲಗನ್ನು ಸೇರಿಸುವಂತೆ ಕೋರಿದ ಡಿಕ್ರಿಧಾರಕರು ಜಾರಿ ಅರ್ಜಿಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ತಿದ್ದುಪಡಿಗೆ ಸಂಬಂಧಿಸಿದ ಸದರಿ ಅರ್ಜಿಗಳನ್ನು ವಿವರಣಾತ್ಮಕ ಆಕ್ಷೇಪಣೆಗಳನ್ನು ಸಲ್ಲಿಸುವ ಮೂಲಕ ಎಲ್ಲಾ ಮೂರು(3) ಜಾರಿ ಅರ್ಜಿಗಳಲ್ಲಿ

ತೀರ್ಪು ಋಣಿಗಳು ವಿರೋಧಿಸಿರುತ್ತಾರೆ. ತಿದ್ದುಪಡಿಗೆ ಸಂಬಂಧಿಸಿದ ಈ ಅರ್ಜಿಗಳನ್ನು ಪರಿಗಣಿಸಿರುವ ಸಮಯದಲ್ಲಿ, ಜಾರಿ ನ್ಯಾಯಾಲಯವು ಸ್ವತಃ ಊರ್ಜಿತತ್ವದ ವಿಷಯವನ್ನು ಒಂದೇ ತೀರ್ಪು ಹಾಗೂ ಡಿಕ್ರಿಯನ್ನು ಆಧರಿಸಿ ಹೇಗೆ ಎರಡು(2) ಜಾರಿ ಅರ್ಜಿಗಳು ಅಂದರೆ ಒಂದು ಪ್ರಧಾನ ಸಾಲಗಾರನ ವಿರುದ್ಧ ಹಾಗೂ ಮತ್ತೊಂದು ಖಾತರಿದಾರನ ವಿರುದ್ಧ ಊರ್ಜಿತವಾದವು ಎಂಬುದನ್ನು ಪ್ರಸ್ತಾಪಿಸಿದ್ದು, ಮಾನ್ಯ ವಕೀಲರು ವಾದಿಸಿರುವ ವಾದವನ್ನು ನಾವು ಆಲಿಸಿರುತ್ತೇವೆ. ಡಿಕ್ರಿದಾರಕರು ಎರಡು ಜಾರಿ ಅರ್ಜಿಗಳನ್ನು ಎಂದರೆ, ಪ್ರತ್ಯೇಕವಾಗಿ ಪ್ರಧಾನ ಸಾಲಗಾರ ಮತ್ತು ಖಾತರಿದಾರ ಇವರಿಬ್ಬರ ವಿರುದ್ಧ ಸಲ್ಲಿಸಿದ್ದು, ಅಂಥ ಡಿಕ್ರಿಧಾರಕನು ಡಿಕ್ರಿ ಮೊಬಲಗನ್ನು ಎರಡು ಬಾರಿ ಸ್ವೀಕರಿಸಿರುವುದರಿಂದ ಹಾಗೂ ಅಂಥ ಡಿಕ್ರಿ ಧಾರಕನು ಒಂದೇ ಬಾರಿಗೆ ಇಬ್ಬರು ತೀರ್ಪು ಋಣಿಗಳ ವಿರುದ್ಧ ಮುಂದುವರೆಯದಿರುವುದರಿಂದ, ದಾವೆಯನ್ನು ಮುಂದುವರೆಸಲು ಅನುಮತಿಸಿದಲ್ಲಿ, ಅದನ್ನು ದುರುಪಯೋಗಪಡಿಸಿಕೊಳ್ಳುವ ಅವಕಾಶವಿದ್ದು, ಎರಡೂ ಅರ್ಜಿಗಳನ್ನು ಮುಂದುವರೆಸಿದಲ್ಲಿ, ಡಿಕ್ರಿಧಾರಕನಿಗೆ ಎಷ್ಟು ಹಣವನ್ನು ಸಂದಾಯ ಮಾಡಬೇಕೆಂದು ಖಚಿತಪಡಿಸಿಕೊಳ್ಳಲು ಜಾರಿ ನ್ಯಾಯಾಲಯಕ್ಕೆ ಸಾಧ್ಯವಾಗದಿರಬಹುದಾಗಿರುತ್ತದೆಂದು ಜಾರಿ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಅಂಥ ತೀರ್ಪನ್ನು ದಾಖಲಿಸುವ ಮೂಲಕ, ಜಾರಿ ಅರ್ಜಿ ಸಂ.1272/2014, 1273/2014 ಮತ್ತು 1275/2014ಗಳಲ್ಲಿನ ಡಿಕ್ರಿಧಾರಕನು ಸಲ್ಲಿಸಿದ ಜಾರಿ ಅರ್ಜಿಗಳು ಊರ್ಜಿತವಾಗದಿರುವುದರಿಂದ ವಜಾಗೊಳಿಸಲಾಗಿರುತ್ತದೆ.

5. ಅರ್ಜಿದಾರ/ಡಿಕ್ರಿಧಾರಕರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ಕೆವಿಕ್ ಸೆಟಲ್ವಾಡ್‌ರವರು, ***ಎಸ್.ಪಿ. ಚೆಂಗಲ್ವರಾಯ ನಾಯ್ಡು (ಮೃತರಾಗಿರುತ್ತಾರೆ)ರವರ ಕಾನೂನು ಸಮ್ಮತ ವಾರಸುದಾರರು –ವಿರುದ್ಧ–ಜಗನ್ನಾಥ್ (ಮೃತರಾಗಿರುತ್ತಾರೆ) ರವರ ಕಾನೂನು ಸಮ್ಮತ ವಾರಸುದಾರರು*** [1], ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿ, ತೀರ್ಪು ಬಹಿರಂಗಪಡಿಸುವುದಕ್ಕೆ

1. (1994) 1 ಎಸ್‌ಸಿಸಿ 1) : ಎಐಆರ್ 1994 ಎಸ್‌ಸಿ 853

ಬದ್ಧವಾಗಿರುವಂಥ ಪ್ರತ್ಯರ್ಜಿದಾರರು ನ್ಯಾಯಾಲಯಕ್ಕೆ ಕೆಲವು ಮುಖ್ಯವಾದ ವಾಸ್ತವಾಂಶಗಳನ್ನು ಬಹಿರಂಗಪಡಿಸದೆ ಸದರಿ ಪ್ರಕರಣದಲ್ಲಿ ನ್ಯಾಯಾಲಯದಿಂದ ಪೂರ್ವಭಾವಿ ಡಿಕ್ರಿಯನ್ನು ಪಡೆದಿರುವುದರಿಂದ ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೆ ಅನ್ವಯವಾಗುತ್ತದೆಂದು ವಾದಿಸಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ವಾಸ್ತವವಾಗಿ ಆಯಾಮವು ಇಲ್ಲದಿರುವುದರಿಂದ, ಖಾತರಿದಾರರ ಬದ್ಧತೆಯು, ಪ್ರಧಾನ ಋಣಿಯೊಂದಿಗೆ ಸಹ ವ್ಯಾಪಕತೆಯುನ್ನು ಹೊಂದಿರುತ್ತದೆಯೆಂಬುದನ್ನು ಗಮನಿಸುವಲ್ಲಿ ವಿಫಲವಾಗಿರುತ್ತದೆ. ಇದರಿಂದ, ತೀರ್ಪು ಋಣಿ/ಗಳು ಡಿಕ್ರಿಯ ಮೊಬಲಗನ್ನು ಸಂದಾಯ ಮಾಡಲು ಬದ್ಧರಾಗಿರುತ್ತಾರೆ ಹಾಗೂ ಇದರಿಂದ, ಡಿಕ್ರಿಧಾರಕನು, ಖಾತರಿದಾರ ಮತ್ತು ಪ್ರಧಾನ ಋಣಿಗಳ ವಿರುದ್ಧ ಸ್ವತಂತ್ರವಾಗಿ ಮುಂದುವರಿಯಲು ಹಕ್ಕುಳ್ಳವನಾಗಿರುತ್ತಾನೆ. ಹಾಗಾಗಿ, ಇವರು ಜಾರಿ ಅರ್ಜಿಯನ್ನು ತಿದ್ದುಪಡಿ ಮಾಡುವ ಮೂಲಕ ಕ್ಲೇಮನ್ನೂ ನಿರ್ಬಂಧಿಸಲು ಡಿಕ್ರಿಧಾರಕನನ್ನು ನಿರ್ದೇಶಿಸುವಲ್ಲಿ ಜಾರಿ ನ್ಯಾಯಾಲಯವು ತಪ್ಪನ್ನು ಎಸಗಿದೆಯೆಂದು ವಾದಿಸಿರುತ್ತಾರೆ. ಇದರಿಂದಾಗಿ ಎರಡೂ ಅರ್ಜಿಗಳಲ್ಲಿನ ಕ್ಲೇಮು, ಅಲ್ಲಿ ಎರಡು ಪ್ರತ್ಯೇಕ ಡಿಕ್ರಿಗಳಿದ್ದಾಗ್ಯೂ, ಡಿಕ್ರಿ ಮೊಬಲಗನ್ನು ಮೀರಿರುವುದಿಲ್ಲ. ಅಲ್ಲದೆ, ಇವರು ಪ್ರಧಾನ ಸಾಲಗಾರ ಮತ್ತು ಖಾತರಿದಾರರಿಂದ ಪ್ರತ್ಯೇಕ ಡಿಕ್ರಿಗಳಡಿಯಲ್ಲಿ ಡಿಕ್ರಿ ಮೊಬಲಗನ್ನು ಕ್ಲೇಮು ಮಾಡುವುದರಿಂದ ಡಿಕ್ರಿಧಾರಕರನ್ನು ತಡೆಯುವಂಥ ಯಾವುದೇ ಕಾನೂನಿನಡಿಯಲ್ಲಿ ಯಾವುದೇ ನಿಷೇಧವಿರುವುದಿಲ್ಲವೆಂದು ವಾದಿಸಿರುತ್ತಾರೆ. ಅಲ್ಲದೆ, ತಮ್ಮ ನಿವೇದನೆಗೆ ಪೂರಕವಾಗಿ, ***ಜಗನ್ನಾಥ್ ಗಣೇಶ್‌ರಾಮ್ ಅಗರ್‌ವಾಲ –ವಿರುದ್ಧ– ಶಿವ್‌ನಾರಾಯಣ್ ಭಗೀರಥ್ ಮತ್ತು ಇತರರು*** [2]**,** ಪ್ರಕರಣದಲ್ಲಿನ ಬಾಂಬೆ ಉಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿರುತ್ತಾರೆ. ಇದರ ಮಟ್ಟಿಗೆ ಖಾತರಿಯ ಬದ್ಧತೆಯು ಸಹ–ವ್ಯಾಪಕತೆಯನ್ನು ಹೊಂದಿರುತ್ತದೆಯೇ ಹೊರತು ಅದಕ್ಕೆ ಪರ್ಯಾಯವಿರುವುದಿಲ್ಲ. ಇದರಿಂದ ಅಸಲು ಮತ್ತು ಭದ್ರತೆಗಳೆರಡೂ ಸಾಲಗಾರರಿಗೆ ಏಕಕಾಲದಲ್ಲಿ ಬದ್ಧವಾಗಿರುತ್ತವೆ. ಹಾಗಾಗಿ, ಜಾರಿ ನ್ಯಾಯಾಲಯವು, ತನ್ನಿಂದ ಪಡೆದ ಡಿಕ್ರಿಗೆ ವಿರುದ್ಧವಾಗಿ ಜಾರಿ ಅರ್ಜಿಯಲ್ಲಿ ಡಿಕ್ರಿಧಾರಕನನ್ನು ನಿರ್ಬಂಧಿಸುವ ಕ್ಲೇಮಿನಲ್ಲಿ ಪರಿಣಾಮಕಾರಿ ಫಲಿತಾಂಶ ಬರುವಂಥ

2. ಎಐಆರ್ 1940 ಬಾಂಬೆ 247

ಜಾರಿ ಅರ್ಜಿಗಳನ್ನು ತಿದ್ದುಪಡಿ ಮಾಡಲು ಡಿಕ್ರಿಧಾರಕನನ್ನು ನಿರ್ದೇಶಿಸುವಂತಿಲ್ಲವೆಂದೂ ವಾದಿಸಿರುತ್ತಾರೆ. ವರದಿಯಾದ ಅಲ್ಲದೆ ಇವರು ***ದಿ ಹುಕುಮ್‌ಚಂದ್ ಇನ್ಷುರೆನ್ಸ್ ಕಂ.ಲಿ. –ವಿರುದ್ಧ– ದಿ ಬ್ಯಾಂಕ್ ಆಫ್ ಬರೋಡ ಮತ್ತು ಇತರರು*** [3], ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಉದಾಹರಿಸಿ, ಇದರಲ್ಲಿ, ವ್ಯವಹರಣೆಯು ಒಂದೇ ಆಗಿದ್ದಾಗ್ಯೂ, ಎರಡು ಹೊಣೆಗಾರಿಕೆಗಳು ಪ್ರತ್ಯೇಕ ಹಾಗೂ ವಿಭಿನ್ನವಾಗಿರುವುದರಿಂದ, ಖಾತರಿ ನೀಡುವ ಹೊಣೆಗಾರಿಕೆಯು ವಾಸ್ತವವಾಗಿ ಪ್ರತ್ಯೇಕ ಹೊಣೆಗಾರಿಕೆಯಾಗುವುದರಿಂದ ಪ್ರಧಾನ ಸಾಲಗಾರನ ಹೊಣೆಗಾರಿಕೆ ಹಾಗೂ ಖಾತರಿ ನೀಡುವವನ ಹೊಣೆಗಾರಿಕೆಯು ಸಹ ವ್ಯಾಪಕತೆಯನ್ನು ಹೊಂದಿರುತ್ತದೆಂದು ಅಭಿಪ್ರಾಯಪಡಲಾಗಿರುತ್ತದೆ. ಹಾಗಾಗಿ, ವಾಸ್ತವವಾಗಿ ಪ್ರಧಾನ ಸಾಲಗಾರನಿಗಿರುವ ಪ್ರತ್ಯೇಕ ಹೊಣೆಗಾರಿಕೆಯೊಂದಿಗೆ ಖಾತರಿ ನೀಡಿದವನ ಹೊಣೆಗಾರಿಕೆಯು ಸಹ ವ್ಯಾಪಕತೆಯನ್ನು ಹೊಂದಿದ್ದು ಇದನ್ನು ಅವರಿಬ್ಬರ ವಿರುದ್ಧ ಸ್ವತಂತ್ರವಾಗಿ ಜಾರಿಗೊಳಿಸಬಹುದೆಂದು ವಾದಿಸಲಾಗಿರುತ್ತದೆ. ಅಲ್ಲದೆ ಇವರು, ***ಬೆಥಿಯಾ ವೆಂಕನ್ನ –ವಿರುದ್ಧ– ಸೇಠ್ ಚುನಿಲಾಲ್ ಮೂಲ್‌ಚಂದ್ ರಿಜಿಸ್ಟರ್ಡ್ ಫರ್ಮ್, ಕಾಕಿನಾಡ, ಮ್ಯಾನೇಜಿಂಗ್ ಪಾರ್ಟನರ್, ಚುನಿಲಾಲ್*** [4] ಪ್ರಕರಣದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿದ್ದು ಅದರಲ್ಲಿ, ಪ್ರಶ್ನಿತ ಆದೇಶವು ಗುಣಾರ್ಹತೆಯನ್ನು ಹೊಂದಿಲ್ಲದಿರುವುದರಿಂದ, ಎರಡು ಜಾರಿ ಅರ್ಜಿಗಳನ್ನು ಸಲ್ಲಿಸುವ ಮೂಲಕ ಒಂದೇ ಬಾರಿಗೆ ಇಬ್ಬರು ತೀರ್ಪು ಋಣಿಗಳಿಂದ ಅವರ ಮೊಬಲಗನ್ನು ವಸೂಲಿ ಮಾಡುವ ನಡಾವಳಿಗಳಿಂದ ಡಿಕ್ರಿಧಾರಕರನ್ನು ಪ್ರತಿವಾದಿಸುವುದಿಲ್ಲವೆಂದು ಸ್ಪಷ್ಟವಾಗಿ ಅಭಿಪ್ರಾಯಪಡಲಾಗಿರುತ್ತದೆ. ಅಲ್ಲದೆ ಇವರು ವಿಭಾಗೀಯ ಪೀಠವು ಈ ವಿಚಾರವಾಗಿ ಬಹಳ ಹಿಂದೆ ನೀಡಿದ್ದ ತೀರ್ಪನ್ನು ಪರಿಗಣಿಸಿರುವುದಿಲ್ಲವೆಂಬ ಅಂಶದ ಬಗ್ಗೆ ಈ ನ್ಯಾಯಾಲಯದ ಗಮನವನ್ನು ಸೆಳೆದಿರುತ್ತಾರೆ. ವಾಸ್ತವವಾಗಿ ಸದರಿ ತೀರ್ಪನ್ನು ತರುವಾಯದ ***ವೆಂಕಟೇಶ್ವರ ರಾವ್ ಮತ್ತು ಇತರರು –ವಿರುದ್ಧ– ಮಾರ್ಗದರ್ಶಿ ಚಿಟ್ ಫಂಡ್ಸ್ ಲಿ. ಮತ್ತು ಮತ್ತೊಬ್ಬರು*** [5], ಪ್ರಕರಣದಲ್ಲಿ ಅನುಸರಿಸಲಾಗಿರುತ್ತದೆ. ಇದರಿಂದ ವಿಭಾಗೀಯ

3. ಎಐಆರ್ 1977 ಕೆಎಆರ್ 204
4. ಎಐಆರ್ 1961 ಎಪಿ 63
5. 2003ರ ಎಸ್‌ಸಿಸಿ ಆನ್‌ಲೈನ್ ಎಪಿ 659

ಪೀಠದ ತೀರ್ಪು ತನ್ನ ಪೂರ್ವ ನಿದರ್ಶಿತ ಮೌಲ್ಯವನ್ನು ಕಳೆದುಕೊಂಡಿರುವುದಿಲ್ಲ. ಅಲ್ಲದೆ ಇವರು ಮುಂದುವರೆದು, ಇದು ಸರಿಯಾದ ಕಾನೂನನ್ನು ವಿಧಿಸದಿರುವುದರಿಂದ, ವಾಸ್ತವಾಂಶಗಳ ಮೇಲೆ ಸದರಿ ತೀರ್ಪನ್ನು ಅನ್ವಯಿಸಲು ಅವಕಾಶ ನೀಡದೆ ಪ್ರತ್ಯರ್ಜಿದಾರ ಅಥವಾ ಯಾರೇ ಇತರೆ ಪಕ್ಷಕಾರರ ಪರ ಹಾಜರಾದ ನ್ಯಾಯವಾದಿಗಳು ***ಡಾ|| ವಿಮಲ –ವಿರುದ್ಧ– ಮೆ|| ಶ್ರೀರಾಮ ಚಿಟ್ಸ್ ಅಂಡ್ ಇನ್‌ವೆಸ್ಟ್‌ಮೆಂಟ್ಸ್ ಪ್ರೈ.ಲಿ.*** [6] ನ ಪ್ರಕರಣದಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸದಿದ್ದಾಗ್ಯೂ ಜಾರಿ ನ್ಯಾಯಾಲಯವು ಉದಾಹರಿಸಿ ದೋಷವೆಸಗಿರುತ್ತದೆ.

ಮುಂದುವರೆದು, ಇವರು ಸ್ವಾಭಾವಿಕ ನ್ಯಾಯದ ತತ್ವಗಳು ಒಂದು ಚಲನೆಯನ್ನು ನೀಡಿವೆಯೆಂದು ನಿವೇದಿಸಿಕೊಂಡಿರುತ್ತಾರೆ. ಹಾಗಾಗಿ, ಇದರ ಆಧಾರದ ಮೇಲೂ ಸಹ ಪ್ರಶ್ನಿತ ಆದೇಶವನ್ನು ರದ್ದುಪಡಿಸಲು ಕೋರಿದೆ. ಮುಂದುವರೆದು, ಇವರು 21ನೇ ನಿಯಮದ 21ನೇ ಕ್ರಮಾದೇಶದ ಉಪಬಂಧಗಳು ಸ್ವತಂತ್ರವಾಗಿ ಎರಡು ತೀರ್ಪುಗಳ ವಿರುದ್ಧ ಪ್ರತ್ಯೇಕ ಜಾರಿ ಅರ್ಜಿಗಳೊಂದಿಗೆ ಮುಂದುವರೆಯುವುದಕ್ಕೆ ಉದ್ದೇಶಿಸುವುದಿಲ್ಲವೆಂದು ತೀರ್ಮಾನಕ್ಕೆ ಬರಲು ತಪ್ಪನ್ನು ಜಾರಿ ನ್ಯಾಯಾಲಯವು ಎಸಗಿರುತ್ತದೆಂದೂ ವಾದಿಸಿರುತ್ತಾರೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ 21ನೇ ನಿಯಮದ 21ನೇ ಕ್ರಮಾದೇಶದ ಸರಳ ಓದು, ಡಿಕ್ರಿಧಾರಕನು ಬೇರೆ ಬೇರೆ ತೀರ್ಪು ಋಣಿಗಳ ವಿರುದ್ಧ ಏಕಕಾಲಕ್ಕೆ ಮತ್ತು ಪ್ರತ್ಯೇಕವಾಗಿ ಕಾರ್ಯ ವಿಧಾನದಿಂದ ಪ್ರತಿವಾರಿಸಲಾಗುತ್ತದೆಂದು ಸೂಚಿಸುವುದಿಲ್ಲ. ಅಲ್ಲದೆ, ಸೌಲಭ್ಯಗಳನ್ನು ಉತ್ತಮವಾಗಿ ರೂಪಿಸಲು ಪಕ್ಷಕಾರರನ್ನು ನಿರ್ದೇಶಿಸುವ ಅಧಿಕಾರವು ಇದನ್ನು ಬಹಿರಂಗಪಡಿಸಲು ಆಜೀವಿಕೆಯಿಂದ ಪಡೆಯಲಾಗಿರುತ್ತದೆ ಎಂದು ವಾದಿಸಿರುತ್ತಾರೆ ಮತ್ತು ಇದರಿಂದ ಮದ್ರಾಸ್ ಉಚ್ಚ ನ್ಯಾಯಾಲಯದ ತೀರ್ಪು ಸರಿಯಾದ ಕಾನೂನನ್ನು ವಿಧಿಸಿರುವುದಿಲ್ಲವೆಂದೂ ಸಹ ಇವರು ವಾದಿಸಿರುತ್ತಾರೆ. ಈ ಆಧಾರಗಳ ಮೇಲೆ, ಡಬ್ಲ್ಯೂ.ಪಿ.ಸಂ.32393/2015

6. 1999 ಎಸ್‌ಸಿಸಿ ಆನ್‌ಲೈನ್ ಮದ್ರಾಸ್ 710

ಡಬ್ಲೂ.ಪಿ.ಸಂ.32400/2014, ಡಬ್ಲ್ಯೂ.ಪಿ.ಸಂ. 32403/2015 ಮತ್ತು ಡಬ್ಲ್ಯೂ.ಪಿ.ಸಂ.32405/2015 ಇವುಗಳಲ್ಲಿನ ಪ್ರಶ್ನಿತ ಆದೇಶವನ್ನು ರದ್ದುಪಡಿಸಲು ಕೋರಿರುತ್ತಾರೆ.

6. ರಿಟ್ ಅರ್ಜಿ ಸಂ.32401/2015, ರಿಟ್ ಅರ್ಜಿ ಸಂ. 32402/2015 ಮತ್ತು ರಿಟ್ ಅರ್ಜಿ ಸಂ. 32404/2015ಗಳು ಸಂಬಂಧಪಡುವಷ್ಟರ ಮಟ್ಟಿಗೆ ಈ ಮೊದಲ ರಿಟ್ ಅರ್ಜಿಗಳಲ್ಲಿ ಎತ್ತಿದ ವಾದಗಳನ್ನು ಪುನರುಚ್ಚರಿಸಲಾಗಿದ್ದು, ***ಬೆಥಿಯಾ ವೆಂಕನ್ನ –ವಿರುದ್ಧ– ಸೇಠ್ ಚುನಿಲಾಲ್ ಮೂಲ್‌ಚಂದ್ ರಿಜಿಸ್ಟರ್ಡ್ ಫರ್ಮ್, ಕಾಕಿನಾಡ, ಮ್ಯಾನೇಜಿಂಗ್ ಪಾರ್ಟನರ್ ಚುನಿಲಾಲ್ (ಮೇಲಿನಂತೆ),*** ಪ್ರಕರಣದಲ್ಲಿ ಆಂಧ್ರಪ್ರದೇಶದ ವಿಭಾಗೀಯ ಪೀಠದ ತೀರ್ಪನ್ನು ಉದಾಹರಿಸಿರುತ್ತಾರೆ. ಸದರಿ ತೀರ್ಪನ್ನು ***ವೆಂಕಟೇಶ್ವರ ರಾವ್ ಮತ್ತು ಇತರರು –ವಿರುದ್ಧ– ಮಾರ್ಗದರ್ಶಿ ಚಿಟ್ ಫಂಡ್ಸ್ ಲಿ. ಮತ್ತು ಮತ್ತೊಬ್ಬರು (ಮೇಲಿನಂತೆ)*** ಪ್ರಕರಣದಲ್ಲಿ ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯದ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು ಆ ತರುವಾಯ ಅನುಸರಿಸಲಾಗಿರುತ್ತದೆ ಎಂದೂ ಅಲ್ಲದೆ, ಪ್ರದಾನ ಸಾಲಗಾರನ ವಿರುದ್ಧ ಸಲ್ಲಿಸಲಾದ ಜಾರಿ ಅರ್ಜಿ ಸಂ.1269/2014, 1270/2014 ಮತ್ತು 1271/2014 ಇವುಗಳ ಆಧಾರದ ಮೇಲೆ 1272/2014, 1273/2014 ಮತ್ತು 1275/2014ರ ಜಾರಿ ಅರ್ಜಿಗಳನ್ನು ವಜಾ ಮಾಡುವುದು ಇತ್ಯರ್ಥದಲ್ಲಿದೆಯೆಂದು ವಾದಿಸಿರುತ್ತಾರೆ. ಇದರಿಂದ, ಡಿಕ್ರಿಧಾರಕನು ದುರುಪಯೋಗ ಪಡಿಸಿಕೊಂಡ ಪ್ರತಿಯೊಂದು ಅವಕಾಶವೂ ಇದ್ದೂ ಅವು ದೋಷಪೂರ್ಣ ವಾಗಿರುವುದರಿಂದ, ರದ್ದುಪಡಿಸಲು ತಕ್ಕದ್ದಾಗಿದೆ. ಹಾಗಾಗಿ, ಇವರು ರಿಟ್ ಅರ್ಜಿಗಳನ್ನು ಪುರಸ್ಕರಿಸಲು ಕೋರಿದ್ದು, ತಮ್ಮ ವಾದಕ್ಕೆ ಪೂರಕವಾಗಿ, ಈ ಮುಂದಿನ ತೀರ್ಪುಗಳನ್ನು ಉದಾಹರಿಸಿರುತ್ತಾರೆ.

(i) ಎಐಆರ್ 1961 ಎಪಿ 63ರಲ್ಲಿ ವರದಿಯಾದ ಬೇಥಿಯಾ ವೆಂಕನ್ನ –ವಿರುದ್ಧ– ಸೇಠ್ ಚುನಿಲಾಲ್

ಮೂಲ್‌ಚಂದ್ ರಿಜಿಸ್ಟರ್ಡ್ ಫರ್ಮ್, ಕಾಕಿನಾಡ, ಮ್ಯಾನೇಜಿಂಗ್ ಪಾರ್ಟನರ್, ಚುನಿಲಾಲ್

(ii) ಎಐಆರ್ 1977 ಕೆಎಆರ್ 204 – ದಿ ಹುಕುಮ್‌ಚಂದ್ ಇನ್ಶೂರೆನ್ಸ್ ಕಂ. ಲಿ., –ವಿರುದ್ಧ– ದಿ ಬ್ಯಾಂಕ್ ಆಫ್ ಬರೋಡ ಮತ್ತು ಇತರರು

(iii) 2002(1) ಸಿಟಿಸಿ 48 – ರಾಮ ನಾರಾಯಣ್ ಬಟದ್ –ವಿರುದ್ಧ– ವಿಮಲಾ ಜಾವರ್ ಮತ್ತು ಇತರೆ ಆರು ಜನರು

7. ಇದಕ್ಕೆ ವಿರುದ್ಧವಾಗಿ, ರಿಟ್ ಅರ್ಜಿ ಸಂ. 32401/2015, ರಿಟ್ ಅರ್ಜಿ ಸಂ. 32402/2015, ರಿಟ್ ಅರ್ಜಿ ಸಂ. 32403/2015, ರಿಟ್ ಅರ್ಜಿ ಸಂ. 32404/2015 ಮತ್ತು ರಿಟ್ ಅರ್ಜಿ ಸಂ. 32405/2015ಗಳಲ್ಲಿನ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು ಪ್ರಶ್ನಿತ ಆದೇಶಗಳನ್ನು ಬೆಂಬಲಿಸಿರುತ್ತಾರೆ. ಅಲ್ಲದೆ, ಊರ್ಜಿತತ್ವ ಕುರಿತಂತೆ ಜಾರಿ ನ್ಯಾಯಾಲಯವು ಹೊರಡಿಸಿದ ಆದೇಶಗಳು ಭಾರತ ಸಂವಿಧಾನದ 227ನೇ ಅನುಚ್ಛೇದಗಳಡಿಯಲ್ಲಿನ ಮೇಲ್ವಿಚಾರಣಾ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ ಮಧ್ಯೆ ಪ್ರವೇಶಿಸುವಂತಿಲ್ಲವೆಂದು ಹಾಗೂ ಅಂಥ ಅಧಿಕಾರ ಚಲಾವಣೆಯನ್ನು ಕೈಗೊಳ್ಳುವಂತಿಲ್ಲವೆಂದು ಅಲ್ಲದೆ, ಇವರು 17ನೇ ನಿಯಮದ 21ನೇ ಕ್ರಮಾದೇಶವು, ಡಿಕ್ರಿಧಾರಕನು ಒಂದೇ ಡಿಕ್ರಿಯ ಸಂಬಂಧದಲ್ಲಿ ಯಾವುದೇ ಇತ್ಯರ್ಥದಲ್ಲಿರುವ ಜಾರಿ ಅರ್ಜಿಗಳನ್ನು ಕುರಿತಂತೆ ಎಲ್ಲಾ ವಿವರಗಳನ್ನು ಒದಗಿಸಲು ಹಾಗೂ ಅನ್ಯಾಯಯುತವಾದ ಶ್ರೀಮಂತಿಕೆಯನ್ನು ಹೊಂದುವ ಹಾಗೆ, ಪ್ರಶ್ನಿತ ಆದೇಶಗಳನ್ನು ಹೊರಡಿಸುವಲ್ಲಿ ಜಾರಿ ನ್ಯಾಯಾಲಯವು ಯಾವುದೇ ದೋಷವನ್ನು ಎಸಗದಿರುವುದರಿಂದ ಹಾಗೂ ರಿಟ್ ಅರ್ಜಿಗಳ ವಿಲೆಗೆ ಕೋರಿಕೆಯನ್ನು ಸಲ್ಲಿಸದಿರುವುದರಿಂದ, ಅನ್ಯಾಯಯುತ ಶ್ರೀಮಂತಿಕೆಯನ್ನು ಹೊಂದಿರುವ ಹಾಗೆ ಪ್ರಧಾನ ಸಾಲಗಾರ ಹಾಗೂ ಖಾತರಿದಾರನ ವಿರುದ್ಧ ಒಂದೇ ಬಾರಿಗೆ ಜಾರಿ

ಅರ್ಜಿಗಳನ್ನು ಸಲ್ಲಿಸಲು ಡಿಕ್ರಿಧಾರಕನನ್ನು ಗೌಣಗೊಳಿಸಲಾಗಿರುತ್ತದೆಂಬ ವಾಸ್ತವಾಂಶಕ್ಕೆ ಡಿಕ್ರಿಧಾರಕನು ಸೂಚಕನಾಗುವ ಮೂಲಕ 11ನೇ ನಿಯಮ ನಿರ್ದಿಷ್ಟವಾಗಿ 11(2)(ಎ)ಯಿಂದ (ಎಫ್)ವರೆಗಿನ ನಿಯಮಗಳಡಿಯಲ್ಲಿ ಅಂಥ ಮಾಹಿತಿಯನ್ನು ಒದಗಿಸದ ಸಂದರ್ಭಗಳು ಆಜ್ಞಾಪಕವಾಗಿರುತ್ತದೆಂದೂ ಸಹ ಇವರು ನಿವೇದಿಸಿಕೊಂಡಿರುತ್ತಾರೆ. ಇವರ ಹೇಳಿಕೆಗಳಿಗೆ ಪೂರಕವಾಗಿ ಇವರು ಈ ಮುಂದಿನ ತೀರ್ಪುಗಳನ್ನು ಉದಾಹರಿಸಿರುತ್ತಾರೆ.

(i) (2015)5 ಎಸ್‌ಸಿಸಿ 423
ರಾಧೈ ಶ್ಯಾಂ ಮತ್ತು ಮತ್ತೊಬ್ಬರು –ವಿರುದ್ಧ– ಛಬಿ ನಾಥ್ ಮತ್ತು ಇತರರು

(ii) (2003)6 ಎಸ್‌ಸಿಸಿ 675 – ಸೂರ್ಯ ದೇವ ರಾಯ್ –ವಿರುದ್ಧ– ರಾಮ್ ಚಂದರ್ ರಾಯ್ ಮತ್ತು ಇತರರು.

(iiii) ಎಐಆರ್ 1951 ಪಿ ಮತ್ತು ಎಚ್ 371 – ಶ್ರೀ ಡಿ.ಎಚ್.ಎಂ. ಪ್ರೇಮ್‌ಜೀ ಮತ್ತು ಇತರರು –ವಿರುದ್ಧ– ದಿ ಈಸ್ಟರ್ನ್ ಯೂನಿಯನ್ ಬ್ಯಾಂಕ್ ಲಿ., ಚಿತ್ತಗಂಗ್.

(iv) ಎಐಆರ್ 1994 ಎಸ್‌ಸಿ 853 – ಎಸ್.ಪಿ. ಚೆಂಗಲ್ವರಾಯ ನಾಯ್ಡು –ವಿರುದ್ಧ– ಜಗನಾಥ್.

(v) ಎಐಆರ್ 2012 ಎಸ್‌ಸಿ 2858 – ಬಾದಾಮಿ –ವಿರುದ್ಧ– ಭಾಲಿ.

8. ಶ್ರೀ ಎಸ್.ವಿ. ರಾಜೇಶ್ ರಿಟ್ ಅರ್ಜಿ ಸಂಖ್ಯೆ 32399/2015 ಹಾಗೂ ರಿಟ್ ಅರ್ಜಿ ಸಂ.32400/2015ಗಳಲ್ಲಿನ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಎಸ್.ಬಿ. ರಾಜೇಶ್‌ರವರು, ಪ್ರಶ್ನಿತ ಆದೇಶಗಳನ್ನು ಬೆಂಬಲಿಸಿ, ರಿಟ್ ಅರ್ಜಿಗಳ ವಿಲೇಗೆ ಸಂಬಂಧಿಸಿದಂತೆ ಕೋರಿಕೆ ಸಲ್ಲಿಸಿರುತ್ತಾರೆ.

9. ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿ, ದಾಖಲೆಗಳನ್ನು ಪರೀಶೀಲಿಸಿದ ತರುವಾಯ, ಜಾರಿ ಅರ್ಜಿ ಸಂಖ್ಯೆಗಳಾದ 1267, 1268, 1274 ಮತ್ತು 1276/2014 – ಇವುಗಳು ಒಂದೇ ಆಗಿದ್ದು, ಜಾರಿ ಅರ್ಜಿಗಳಾಗಿದ್ದ 1267/2014 ಹಾಗೂ 1268/2014 ರಲ್ಲಿನ ತೀರ್ಪು ಋಣಿಗಳೂ ಸಹ ಅವರುಗಳೇ ಆಗಿರುತ್ತಾರೆ (ಕಿಂಗ್ ಫಿಷರ್ ಏರ್‌ಲೈನ್ಸ್). ಅದೇ ರೀತಿ, ಜಾರಿ ಅರ್ಜಿ ಸಂ.1272, 1273, 1274, 1275 ಮತ್ತು 1276/2014 ಇವರುಗಳಲ್ಲಿನ ತೀರ್ಪು ಋಣಿಗಳು ಅವರುಗಳೇ ಆಗಿರುತ್ತಾರೆ. (ಯುನೈಟೆಡ್ ಬ್ರಿವರೀಸ್ (ಹೋಲ್ಡಿಂಗ್ಸ್) ಲಿಮಿಟೆಡ್) ಜಾರಿ ಅರ್ಜಿ ಸಂಖ್ಯೆ 1273 ಹಾಗೂ 1275/2014 ಗಳಲ್ಲಿನ ಡಿಕ್ರಿಧಾರಕರು ಅವರುಗಳೇ ಆಗಿರುತ್ತಾರೆ. (ಎಡಬ್ಲ್ಯೂಎಎಸ್ ಏರ್ಲ್ಯಾಂಡ್ ಲೀಸಿಂಗ್ ತ್ರೀ.ಲಿ) ಆದಾಗ್ಯೂ, ತೀರ್ಪು ಋಣಿಗಳು ಈ ಎರಡು (2) ಅರ್ಜಿಗಳಲ್ಲಿಯೂ ಅವರುಗಳೇ ಆಗಿರುತ್ತಾರೆ. (ಯುನೈಟೆಡ್ ಬ್ರಿವರೀಸ್ (ಹೋಲ್ಡಿಂಗ್ಸ್) ಲಿಮಿಟೆಡ್) ಇದರಿಂದ, ಡಿಕ್ರಿ ಧಾರಕನು (ಎಡಬ್ಲ್ಯೂಎಎಸ್ ಏರ್ಲ್ಯಾಂಡ್ ಲೀಸಿಂಗ್ ತ್ರೀ.ಲಿ) ಜಾರಿ ಅರ್ಜಿಗಳ ಸಂಖ್ಯೆ 1270 ಹಾಗೂ 1271/2014ಗಳಲ್ಲಿ ಪ್ರಧಾನ ಸಾಲಗಾರನ ವಿರುದ್ಧ ಎರಡು ಜಾರಿ ಅರ್ಜಿಗಳನ್ನು ಹಾಗೂ ಡಿಕ್ರಿಧಾರಕ ಮೆ॥ ಜೆಬಿ 2443 ಐಎನ್‌ಸಿ ಖಾತರಿದಾರನ ವಿರುದ್ಧ ಜಾರಿ ಅರ್ಜಿ ಸಂ.1272/2014ನ್ನು ಪ್ರಧಾನ ಸಾಲಗಾರನ ವಿರುದ್ಧ ಜಾರಿ ಅರ್ಜಿ ಸಂ.1269/2014ನ್ನು ಸಲ್ಲಿಸಲಾಗಿರುತ್ತದೆ.

10. ತೀರ್ಪು ಹಾಗೂ ಡಿಕ್ರಿಯ ಮೇರೆಗೆ ದಿನಾಂಕ: 13.12.2013ರಂದು ಆರಂಭದಲ್ಲಿ ಒಪ್ಪಿಕೊಂಡಂಥ ಹಾಗೂ ದಿನಾಂಕ: 23.6.2014ರಂದು ತರುವಾಯ ಮಾರ್ಪಾಡುಗೊಂಡಂಥ ಯುನೈಟೆಡ್ ಕಿಂಗ್‌ಡಮ್ ನ್ಯಾಯಾಲಯದಲ್ಲಿ ಪಾಸು ಮಾಡಿದ ತೀರ್ಪು ಹಾಗೂ ಡಿಕ್ರಿಯ ಮೇರೆಗೆ ಬರಬೇಕಾದ ಬಾಕಿ ಹಾಗೂ

ಸಂದಾಯ ಮಾಡಬಹುದಾದ ಮೊಬಲಗುಗಳ ವಸೂಲಿಗೆ ಸಂಬಂಧಿಸಿದಂತೆ ಪ್ರತ್ಯೇಕ ಜಾರಿ ಅರ್ಜಿಗಳ ಮೂಲಕ ಪ್ರತ್ಯೇಕ ಜಾರಿ ಅರ್ಜಿಗಳನ್ನು ಸಲ್ಲಿಸುವ ಮೂಲಕ ಪ್ರತ್ಯರ್ಜಿದಾರರು ಅಂದರೆ ಪ್ರಧಾನ ಸಾಲಗಾರ ಕಿಂಗ್‌ಫಿಷರ್ ಏರ್‌ಲೈನ್ಸ್ ಮತ್ತು ಖಾತರಿದಾರ ಯುನೈಟೆಡ್ ಬ್ರಿವರೀಸ್ (ಹೋಲ್ಡಿಂಗ್ಸ್) ಲಿ. –ವಿರುದ್ಧ– ರಿಟ್ ಅರ್ಜಿದಾರ/ಡಿಕ್ರಿಧಾರಕರು ಜಾರಿ ನಡಾವಳಿಗಳನ್ನು ಆರಂಭಿಸಿರುತ್ತಾರೆ. ತೀರ್ಪುಋಣಿಗಳಿಗೆ ಈ ಜಾರಿ ಅರ್ಜಿಗಳ ಮೇಲೆ ವ್ಯಾಜ್ಯ ನೋಟೀಸನ್ನು ನೀಡಲಾಗಿರುತ್ತಿದ್ದು, ಅವರು ಹಾಜರಾಗಿ ಎಲ್ಲಾ ಜಾರಿ ಅರ್ಜಿಗಳಿಗೆ ಅವರ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಸಂಬಂಧಪಟ್ಟ ಡಿಕ್ರಿಗಳನ್ನು ಮಾರ್ಪಾಡುಗೊಳಿಸಿದ ಹಿನ್ನೆಲೆಯಲ್ಲಿ, ಜಾರಿ ಅರ್ಜಿಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸಲ್ಲಿಸುವಲ್ಲಿ ಅದರ ಪರಿಣಾಮ ತಿಳಿದುಬರುತ್ತದೆ. ಆ ಸಮಯದಲ್ಲಿ, ಜಾರಿ ನ್ಯಾಯಾಲಯವು, ಸ್ವತಃ ಪ್ರಧಾನ ಸಾಲಗಾರ ಹಾಗೂ ಖಾತರಿದಾರನ ವಿರುದ್ಧ ಡಿಕ್ರಿಧಾರಕನು ಎರಡು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿರುವ ಊರ್ಜಿತತ್ವಕ್ಕೆ ಸಂಬಂಧಿಸಿದಂತೆ ವಿವಾದಾಂಶವನ್ನು ಪ್ರಸ್ತಾಪಿಸಿದ್ದು, ಈ ಮುಂದಿನ ನಿರ್ಣಯಗಳನ್ನು ದಾಖಲಿಸುವ ಮೂಲಕ ಪ್ರಶ್ನಿತ ಆದೇಶಗಳನ್ನು ಹೊರಡಿಸಿರುತ್ತದೆ.

**ಜಾರಿ ನ್ಯಾಯಾಲಯವು ದಾಖಲಿಸಿರುವ ನಿರ್ಣಯಗಳು:**

11. ರಿಟ್ ಅರ್ಜಿ ಸಂಖ್ಯೆ 32399/2015, ರಿಟ್ ಅರ್ಜಿ ಸಂಖ್ಯೆ 32400/2015, ರಿಟ್ ಅರ್ಜಿ ಸಂಖ್ಯೆ 32403/2015 ಹಾಗೂ ರಿಟ್ ಅರ್ಜಿ ಸಂಖ್ಯೆ 32405/2015 ಇವುಗಳಲ್ಲಿ, ಜಾರಿ ನ್ಯಾಯಾಲಯವು, ಪ್ರಧಾನ ಸಾಲಗಾರ ಹಾಗೂ ಖಾತರಿದಾರರ ವಿರುದ್ಧ ಎರಡು ಜಾರಿ ಅರ್ಜಿಗಳು ಊರ್ಜಿತವಾಗಿವೆ, ಆದರೆ ಜಾರಿ ಅರ್ಜಿಗಳನ್ನು ತಿದ್ದುಪಡಿ ಮಾಡಲು ಡಿಕ್ರಿಧಾರಕರನ್ನು ನಿರ್ದೇಶಿಸಿದ್ದು, ಇದರಿಂದ ಜಾರಿ ಅರ್ಜಿಗಳಲ್ಲಿನ ಕ್ಲೇಮು, ಡಿಕ್ರಿಧಾರಕನು ಪ್ರತ್ಯೇಕ ಡಿಕ್ರಿಗಳನ್ನು ಪಡೆದಂಥ ವ್ಯವಹರಣೆಯಡಿಯಲ್ಲಿ ಬಾಕಿ ಬರುವ ಮೊಬಲಗನ್ನು ಮೀರತಕ್ಕದ್ದಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಆದಾಗ್ಯೂ, ಜಾರಿ ಅರ್ಜಿ ಸಂಖ್ಯೆ: 1272/2014, 1273/2014 ಮತ್ತು 1275/2014 ಇವುಗಳು ಡಿಕ್ರಿಧಾರಕನು ಜಾರಿ ಅರ್ಜಿ ಸಂಖ್ಯೆ: 1269/2014, 1270/2014

ಹಾಗೂ 1271/2014 ಗಳನ್ನು ಸಲ್ಲಿಸಿದ್ದು, ಸದರಿ ಆದೇಶವನ್ನು ಡಬ್ಲ್ಯು.ಪಿ. ಸಂ.32401/2015, 32402/2015 ಹಾಗೂ 32404/2015 – ಇವುಗಳಲ್ಲಿ ಪ್ರಶ್ನಿಸಲಾಗಿದ್ದು, ಊರ್ಜಿತವಾಗದಿರುವುದರಿಂದ ವಜಾಗೊಳಿಸಲಾಗಿದೆ.

12. ಭಾರತ ಸಂವಿಧಾನದ 227ನೇ ಅನುಚ್ಛೇದದಡಿಯಲ್ಲಿ ಈ ನ್ಯಾಯಾಲಯವು ಮೇಲ್ವಿಚಾರಣಾ ಅಧಿಕಾರ ವ್ಯಾಪ್ತಿಯ ಜಾರಿಗೆ ಸಂಬಂಧಿಸಿದಂತೆ ಯಾವುದೇ ವಿವಾದಗಳಿರುವುದಿಲ್ಲ. 227ನೇ ಅನುಚ್ಛೇದವು ಅಧಿಕಾರ ವ್ಯಾಪ್ತಿಯನ್ನು ಜಾರಿಗೊಳಿಸುವುದರ ಸಂಬಂಧದಲ್ಲಿ ಪ್ರದೇಶಗಳಾದ್ಯಂಥ ಎಲ್ಲಾ ನ್ಯಾಯಾಲಯಗಳು ಹಾಗೂ ನ್ಯಾಯಾಧಿಕರಣಗಳ ಮೇಲೆ ಅಧೀಕ್ಷ ತತ್ವದ ಅಧಿಕಾರವನ್ನು ಪ್ರತಿಯೊಂದು ಉಚ್ಚ ನ್ಯಾಯಾಲಯಕ್ಕೂ ಪ್ರದತ್ತಗೊಳಿಸುತ್ತದೆ.

13. ಯಾವುದೇ ಸಂದರ್ಭದಲ್ಲಿ ನ್ಯಾಯಾಲಯವು, ಅನ್ಯಾಯವಾಗಿದೆ ಅಥವಾ ನ್ಯಾಯ ವೈಫಲ್ಯವಾಗಿದೆ ಎಂಬ ರೀತಿಯಲ್ಲಿ, ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲ ಅಥವಾ ಅಧಿಕಾರ ವ್ಯಾಪ್ತಿಯು ಅಧಿಕಾರವನ್ನು ಚಲಾಯಿಸಲು ವಿಫಲವಾಗಿದೆಯೆಂಬುದನ್ನು, ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ ಅಥವಾ ಅಧಿಕಾರ ವ್ಯಾಪ್ತಿಯ ಅಧಿಕಾರವನ್ನು ಚಲಾಯಿಸುತ್ತಿದೆ ಎಂಬುದನ್ನು ಪರಿಭಾವಿಸಲು ಭಾರತ ಸಂವಿಧಾನದ 227ನೇ ಅನುಚ್ಛೇದದಡಿಯಲ್ಲಿ ಈ ನ್ಯಾಯಾಲಯವು ಚಲಾಯಿಸಬಹುದಾದಂಥ ಅಧಿಕಾರಗಳ ವಿವರಣೆಯು ಆಧಾರವಾಗಿರುತ್ತದೆ. ***ರಾಧೈ ಶ್ಯಾಂ ಮತ್ತು ಮತ್ತೊಬ್ಬರು –ವಿರುದ್ಧ– ಛಬಿ ನಾಥ್ ಮತ್ತು ಇತರರು*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಧಿನಿಯಮ ಸಂ.1999ರ 46ರ ಮೂಲಕ 115 ಸಿಪಿಸಿ ಪ್ರಕರಣದಡಿಯಲ್ಲಿ ಪುನರವಲೋಕನಾ ಅಧಿಕಾರ ವ್ಯಾಪ್ತಿಯನ್ನು ಮೊಟಕುಗೊಳಿಸಿದ್ದಾಗ್ಯೂ, 227ನೇ ಅನುಚ್ಛೇದದಡಿಯಲ್ಲಿ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು, ಬಾಧಕವಾಗದಂತೆ ಉಳಿಯುತ್ತದೆ. ಇದನ್ನು ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ:

7. (2015)5 ಎಸ್‌ಸಿಸಿ 423

"25. ಇಂಗ್ಲೆಂಡ್‌ನಲ್ಲಿ ವಿಶಿಷ್ಟಾಧಿಕಾರ ರಿಟ್‌ಗಳೊಂದಿಗೆ ಸೇರಿಕೊಂಡಿರುವ ತಾಂತ್ರಿಕತೆಯು, ನಮ್ಮ ಸಂವಿಧಾನತ್ಮಕ ಯೋಜನೆಯಡಿಯಲ್ಲಿ ಯಾವುದೇ ಪಾತ್ರವನ್ನು ನಿರ್ವಹಿಸುವುದಿಲ್ಲವೆಂದು ಈ ನ್ಯಾಯಾಲಯವು ಹೇಳಿರುವುದು ವಾಸ್ತವಾಂಶವಾಗಿರುತ್ತದೆ. ಭಾರತದಲ್ಲಿನ ರಾಜರ ನ್ಯಾಯಸ್ಥಾನದಲ್ಲಿ ಮತ್ತು ರಾಜ ನ್ಯಾಯಾಲಯದ ಮೇಲ್ವಿಚಾರಣೆಗೆ ಒಳಪಟ್ಟು ಸೀಮಿತ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಎಲ್ಲಾ ಇತರೆ ನ್ಯಾಯಾಲಯಗಳಲ್ಲಿ ಪರ್ಯಾಯ ವ್ಯವಸ್ಥೆ ಇರುವುದಿಲ್ಲ. ಸಂವಿಧಾನ ಅಥವಾ ಕಾನೂನುಗಳಡಿಯಲ್ಲಿ ನ್ಯಾಯಾಲಯಗಳನ್ನು ರೂಪಿಸಲಾಗಿರುತ್ತದೆ. ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿನ ಎಲ್ಲಾ ನ್ಯಾಯಾಲಯಗಳು ಇದಕ್ಕೆ ಅಧೀನವಾಗಿದ್ದು, 227ನೇ ಅನುಚ್ಛೇದದಡಿಯಲ್ಲಿ ಇದು ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿರುತ್ತದೆ. ರಿಟ್ ಅಧಿಕಾರ ವ್ಯಾಪ್ತಿಯು ಎಲ್ಲಾ ಉಚ್ಚ ನ್ಯಾಯಾಲಯಗಳನ್ನು ಕುರಿತಂತೆ ಸಂವಿಧಾನತ್ಮಕವಾಗಿ ಪ್ರದತ್ತಗೊಳಿಸಲಾಗಿದೆ. ಇಂಗ್ಲೆಂಡ್‌ನಲ್ಲಿ ಅನುಸರಿಸಿದ ರಿಟ್ ಅಧಿಕಾರ ವ್ಯಾಪ್ತಿಯ ಮಂಡಳಿ ತತ್ವಗಳು ಭಾರತಕ್ಕೆ ಅನ್ವಯವಾಗುತ್ತದೆ ಹಾಗೂ ಸರ್ಷಿಯೋರರಿ ರಿಟ್, ನ್ಯಾಯಿಕ ನ್ಯಾಯಾಲಯಗಳನ್ನು ಹೊರತುಪಡಿಸಿದ ನ್ಯಾಯಾಧಿಕರಣಗಳು ಅಥವಾ ಪ್ರಾಧಿಕಾರಗಳು ಅಥವಾ ನ್ಯಾಯಾಲಯಗಳ ಆದೇಶಗಳ ಅಧಿಕಾರ ವ್ಯಾಪ್ತಿಯಿಲ್ಲದೆ ಅಥವಾ ಪೇಟೆಂಟಾಗಿ ದೋಷಪೂರ್ಣವಾಗಿರುವುದಕ್ಕೆ ವಿರುದ್ಧವಾಗಿ ಉಳಿದುಕೊಳ್ಳುತ್ತದೆ. ಅಧೀನ ನ್ಯಾಯಾಲಯಗಳ ನ್ಯಾಯಿಕ ಆದೇಶಗಳೊಂದಿಗೆ ವ್ಯವಹರಿಸುವಲ್ಲಿ ಅವುಗಳ ಕಾರ್ಯ

> ನಿರ್ವಹಣೆಯ ನಿಯಂತ್ರಣವನ್ನು 227ನೇ ಅನುಚ್ಛೇದದಡಿಯಲ್ಲಿನ ಅಪೀಲಿನ ಅಥವಾ ಪುನರವಲೋಕನ ಅಧಿಕಾರಗಳು ಅಥವಾ ಅಧೀಕ್ಷಕತೆಯ ರೂಪದಲ್ಲಿ ಚಲಾಯಿಸಲಾಗುತ್ತದೆ.

14. ಈ ತತ್ವಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಈ ರಿಟ್ ಅರ್ಜಿಗಳಲ್ಲಿನ ಪ್ರಸುತ ವಾಸ್ತವಾಂಶಗಳನ್ನು ಪ್ರಶ್ನಿತ ಆದೇಶದ ಹಿನ್ನೆಲೆಯಲ್ಲಿ ಪರೀಕ್ಷಿಸಬೇಕಾಗಿರುತ್ತದೆ. ಅಂತಿಮವಾಗಿ, 11,21 ಮತ್ತು 30ನೇ ನಿಯಮಗಳ 21ನೇ ಕ್ರಮಾದೇಶದಡಿಯಲ್ಲಿ ಲಭ್ಯವಾದ ಅಧಿಕಾರದ ಬಲದಿಂದ ಡಿಕ್ರಿಧಾರಕನು, ಡಿಕ್ರಿ ಮೊಬಲಗಿನ ವಸೂಲಿಗೆ ಸಂಬಂಧಿಸಿದಂತೆ ಬೇರೆ ಬೇರೆ ತೀರ್ಪುಗಳ ವಿರುದ್ಧ ಒಂದೇ ಬಾರಿಗೆ ಮುಂದುವರೆಯಲು ಹಕ್ಕುಳ್ಳವರಾಗಿರತಕ್ಕದ್ದು. ಸಿವಿಲ್ ಪ್ರಕ್ರಿಯಾ ಸಂಹಿತೆ ಅಥವಾ ಯಾವುದೇ ಇತರೆ ಕಾನೂನು ಕ್ಲೇಮು ಜಂಟಿಯಾಗಿ ಮತ್ತು ಬಹು ಆಯಾಮಗಳಲ್ಲಿ, ಇರುವೆಡೆಗಳಲ್ಲಿ ತೀರ್ಪು ಋಣಿಯ ವಿರುದ್ಧ ಏಕಕಾಲಕ್ಕೆ ಸಲ್ಲಿಸಿದ ಜಾರಿ ಅರ್ಜಿಗಳಲ್ಲಿ ಆತನ ಕ್ಲೇಮನ್ನು ಡಿಕ್ರಿಧಾರಕನು ನಿರ್ಬಂಧಿಸತಕ್ಕದ್ದೆಂದು ಸೂಚಿಸುವಂತಿಲ್ಲ. ವಾಸ್ತವವಾಗಿ ಇಂಥದೇ ಸದೃಶ್ಯ ವಿಷಯವು ವರದಿಯಾದ ***ಬೆಥಿಯಾ ವೆಂಕನ್ನ –ವಿರುದ್ಧ– ಸೇಠ್ ಚುಣಿಲಾಲ್ ಮೂಲ್ಚಂದ ರಿಜಿಸ್ಟರ್ಡ್ ಫರ್ಮ್, ಕಾಕಿನಾಡ, ಬೈ ಮ್ಯಾನೇಜಿಂಗ್ ಪಾರ್ಟ್‌ನರ್, ಚುನಿಲಾಲ್*** ನ ಪ್ರಕರಣದಲ್ಲಿ ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಎದುರು ಪರಿಗಣನೆಗಾಗಿ ಬಂದಿರುತ್ತದೆ ಮತ್ತು ಪರಿಗಣನೆಗೆ ಸಂಬಂಧಿಸಿದಂತೆ ರೂಪಿಸಲಾದ ಅಂಶವು, ಈ ಮುಂದಿನ ಪರಿಣಾಮವನ್ನು ಹೊಂದಿರುತ್ತವೆ.

> "3. ಏಕಕಾಲಕ್ಕೆ, ಡಿಕ್ರಿಯಡಿಯಲ್ಲಿ ಬಾಕಿಯಿರುವ ಒಂದೇ ಮೊಬಲಗಿಗೆ ಸಂಬಂಧಿಸಿದಂತೆ ಇಬ್ಬರು ಬೇರೆ ಬೇರೆ ತೀರ್ಪು ಋಣಿಗಳ ವಿರುದ್ಧ ಎರಡು ಪ್ರತ್ಯೇಕ ಅರ್ಜಿಗಳಲ್ಲಿ ಏಕಕಾಲಕ್ಕೆ ಜಾರಿಯ ಅನುಷ್ಠಾನವನ್ನು ಮುಂದುವರೆಸಬಹುದೇ ಎಂಬುದು ಈ ಅಪೀಲಿನಲ್ಲಿ ಪರಿಗಣನೆಗಾಗಿ ಉದ್ಭವಿಸಿರುವ ಸರಳ ಅಂಶವಾಗಿರುತ್ತದೆ?"

15. ಸದರಿ ಪ್ರಶ್ನೆಯನ್ನು ಎತ್ತಿರುವುದರಿಂದ, ಅರ್ಜಿದಾರರಿಗೆ ವಿರುದ್ಧವಾಗಿ ಹೊರಡಿಸಿದ ಡಿಕ್ರಿಯ ಜಾರಿಯಲ್ಲಿ ಇಬ್ಬರೂ ತೀರ್ಪು ಋಣಿಗಳ ವಿರುದ್ಧ ಏಕಕಾಲಕ್ಕೆ ಮುಂದುವರೆಯಲು ಕಾನೂನಿನಡಿಯಲ್ಲಿ ಡಿಕ್ರಿಧಾರಕನು ಹಕ್ಕುಳ್ಳವನಾಗಿರುತ್ತಾನೆಂದು ಮತ್ತು ಡಿಕ್ರಿಯ ಜಾರಿಗೆ ಸಂಬಂಧಿಸಿದಂತೆ ಹಲವಾರು ಅರ್ಜಿಗಳನ್ನು ಏಕಕಾಲದಲ್ಲಿ ಸಲ್ಲಿಸಲಾಗುವುದಿಲ್ಲವೆಂದು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ಅಥವಾ ಯಾವುದೇ ಇತರೆ ಕಾನೂನಿನಡಿಯಲ್ಲಿ ಧನಾತ್ಮಕವಾಗಿ ವಿಧಿಸಲಾಗುವುದಿಲ್ಲವಾದ್ದರಿಂದ, ಅಂಥ ವಿಧಾನವನ್ನು ಅಳವಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಅನುಮತಿಯನ್ನು ಅಗತ್ಯಪಡಿಸಿರುವುದಿಲ್ಲವೆಂದು ಅಭಿಪ್ರಾಯಪಡಲಾಗಿರುತ್ತದೆ. ಒಟ್ಟಾರೆ ತೀರ್ಮಾನದಲ್ಲಿ, ಎರಡು ಜಾರಿ ಅರ್ಜಿಗಳನ್ನು ಡಿಕ್ರಿಧಾರಕನು ಸಲ್ಲಿಸಬಹುದು ಹಾಗೂ ಇಬ್ಬರು ತೀರ್ಪು ಋಣಿಗಳಿಂದ ಒಂದೇ ಭಾರಿ ಅಂಥ ಮೊಬಲಗನ್ನು ವಸೂಲಿ ಮಾಡುವುದನ್ನು ಡಿಕ್ರಿಧಾರಕನು ಆಯ್ಕೆ ಮಾಡಿಕೊಂಡಲ್ಲಿ ಅಂಥ ಡಿಕ್ರಿಧಾರಕನು ಅಳವಡಿಸಿಕೊಳ್ಳಬೇಕೆಂದು ಅಗತ್ಯಪಡಿಸಿದಂಥ ಒಂದೇ ಮಾರ್ಗವೆಂದರೆ ಅರ್ಜಿಗಳನ್ನು ಸಲ್ಲಿಸಿ ವಸೂಲಿ ಮಾಡಿಕೊಂಡ ಮೊಬಲಗನ್ನು ಬಹಿರಂಗಪಡಿಸುವುದೇ ಆಗಿದ್ದು, ಅಂಥ ಡಿಕ್ರಿಧಾರಕನು ಡಿಕ್ರಿ ಮೊಬಲಗನ್ನು ಅಥವಾ ಡಿಕ್ರಿಧಾರಕನು ಹಕ್ಕುಳ್ಳವನಾಗಿರುವಂಥ ಮೊಬಲಗನ್ನು ಎರಡುಸಾರಿ ವಸೂಲು ಮಾಡಬಹುದಾದಂಥ ಸಂದರ್ಭವನ್ನು ಹೊರತುಪಡಿಸಿದ ಅನ್ಯಾಯಯುತವಾದ ಹಣವನ್ನು ಡಿಕ್ರಿಧಾರಕರು ಹೊಂದಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕಾಗಿರುತ್ತದೆಂದು ಅಭಿಪ್ರಾಯ ಪಡಲಾಗಿರುತ್ತದೆ. ವಿಭಾಗೀಯ ಪೀಠವು ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ:

> "14,619-13-7ರ ಮೊಬಲಗಿಗೆ ಸಂಬಂಧಿಸಿದಂತೆ, ಇಬ್ಬರು ಪ್ರತಿವಾದಿಗಳ ವಿರುದ್ಧ ಏಕಕಾಲದಲ್ಲಿ ಎರಡು ಜಾರಿ ಅರ್ಜಿಗಳು ಇತ್ಯರ್ಥದಲ್ಲಿರುವಂತಿಲ್ಲವೆಂಬ ಆಧಾರದ ಮೇಲೆ ವಾದ-ವಿವಾದಗಳು ಸಾಗಿವೆ. ಈ ವಾದವನ್ನು ಸಮ್ಮತಿಸಲು ನಾವು ಸಮರ್ಥರಾಗಿರುವುದಿಲ್ಲ. ಡಿಕ್ರಿದಾರಕರು ತಮ್ಮ ಡಿಕ್ರಿಯ ಜಾರಿಯಲ್ಲಿ ಬೇರೆ ಬೇರೆ ತೀರ್ಪುಋಣಿಗಳ

ವಿರುದ್ಧ ಏಕಕಾಲದಲ್ಲೇ ಮುಂದುವರೆಯಲು ಕಾನೂನಿನಡಿಯಲ್ಲಿ ಹಕ್ಕುಳ್ಳವರಾಗಿದ್ದು, ಇಂಥ ವಿಧಾನಕ್ಕೆ ನ್ಯಾಯಾಲಯದ ನಿರ್ದಿಷ್ಟ ಅನುಮತಿಯು ಅವಶ್ಯಕವಾಗಿರುವುದಿಲ್ಲ. ಡಿಕ್ರಿಯ ಜಾರಿಗೆ ಸಂಬಂಧಿಸಿದಂತೆ ಹಲವಾರು ಅರ್ಜಿಗಳನ್ನು ಏಕಕಾಲಕ್ಕೆ ಸಲ್ಲಿಸಬಾರದೆಂದು ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿಯಾಗಲೀ ಅಥವಾ ಧನಾತ್ಮಕವಾಗಿ ರೂಪಿಸಿರುವಂಥ ಯಾವುದೇ ಇತರೆ ಕಾನೂನಿನಲ್ಲಿಯಾಗಲೀ ಇರುವುದಿಲ್ಲ.

ಸಿವಿಲ್ ಪ್ರಕ್ರಿಯಾ ಸಂಹಿತೆಯ 11(2)(ಇ) ನಿಯಮದ 21ನೇ ಕ್ರಮಾದೇಶದಡಿಯಲ್ಲಿ, ಡಿಕ್ರಿಧಾರಕನು, ಡಿಕ್ರಿಯಾದ ತರುವಾಯ, ಪಕ್ಷಕಾರರ ನಡುವೆ ಯಾವುದೇ ಹಣಸಂದಾಯ ಅಥವಾ ಇತರೆ ಹೊಂದಾಣಿಕೆಗಳಲ್ಲಿ ಭಿನ್ನಾಭಿಪ್ರಾಯ ಉದ್ಭವಿಸಿದಲ್ಲಿ ಮಾತ್ರ, ಜಾರಿ ಅರ್ಜಿಯಲ್ಲಿ ನಮೂದಿಸ ಬೇಕಾಗುತ್ತದೆಯೇ ಹೊರತು ಇತ್ಯರ್ಥದಲ್ಲಿರುವಂಥ, ಇವರು ಸಲ್ಲಿಸಿರುವ ಜಾರಿ ಅರ್ಜಿಯ ಮೊಬಲಗಿಗೆ ಅಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆಯ 11(2)(ಎಫ್) ನಿಯಮದ 21ನೇ ಕ್ರಮಾದೇಶದಡಿಯಲ್ಲಿ ಡಿಕ್ರಿಯ ಜಾರಿಗೆ ಸಂಬಂಧಿಸಿದ ಪ್ರತಿ ಅರ್ಜಿಯು, ಡಿಕ್ರಿಯ ಜಾರಿಗೆ ಸಂಬಂಧಿಸಿದಂತೆ ಹಿಂದೆ ಯಾವುದಾದರು ಅರ್ಜಿಯನ್ನು ಈ ಹಿಂದೆ ಸಲ್ಲಿಸಿದ್ದರೆ, ಅಂಥ ಅರ್ಜಿಗಳ ದಿನಾಂಕಗಳು ಅವುಗಳ ಫಲಿತಾಂಶವನ್ನು ತಿಳಿಸಬೇಕಾಗಿರುತ್ತದೆ.

ಖಂಡಿತವಾಗಿ ಈ ಉಪಬಂಧವು, ಏಕಕಾಲದ ಜಾರಿಗಳನ್ನು ನಿಷೇಧಿಸುವುದಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆಯ ನಿಯಮ 30ರ 21ನೇ ಕ್ರಮಾದೇಶವು,

ಹಲವಾರು ಮಾರ್ಗಗಳಲ್ಲಿ ಏಕಕಾಲದಲ್ಲಿ ಡಿಕ್ರಿ ಜಾರಿಯಾಗುವುದರೊಂದಿಗೆ ವ್ಯವಹರಿಸುತ್ತದೆ. ಇದು, ತೀರ್ಪು ಋಣಿಯನ್ನು ತಡೆಹಿಡಿಯುವ ಮೂಲಕ ಅಥವಾ ಇವರ ಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ಅಥವಾ ಎರಡರಿಂದಲೂ ಡಿಕ್ರಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ. ಜಾರಿಯ ಈ ಎರಡೂ ವಿಧಾನಗಳನ್ನು ಡಿಕ್ರಿಧಾರಕನಿಗೆ ಲಭ್ಯವಾಗಿರುವಂಥ ಇತರೆ ಪರಿಹಾರಗಳಿಗೆ ಪರ್ಯಾಯದಂತೆ ನಮೂದಿಸಲಾಗಿರುತ್ತದೆ. ಇದನ್ನು ಆ ತರುವಾಯ ಆಯ್ಕೆ ಮಾಡಿಕೊಂಡು, ನಿರ್ಧರಿಸಬಹುದಾಗಿರುತ್ತದೆ. 21ನೇ ನಿಯಮವು, ತನ್ನ ಪರಿಭಾಷೆಗಳಿಂದಾಗಿ ಸಾಮಾನ್ಯವಾದುದಾಗಿದ್ದು, ಇದು, ಏಕಕಾಲಕ್ಕೆ ವ್ಯಕ್ತಿಯ ಮತ್ತು ತೀರ್ಪು-ಋಣಿಗಳ ಸ್ವತ್ತಿನ ವಿರುದ್ಧ ಡಿಕ್ರಿಯ ಜಾರಿಯನ್ನು ಮುಂದುವರೆಸಬಹುದೆಂದು ಉದ್ದೇಶಿಸಿರುತ್ತದೆ. ವಾಸ್ತವವಾಗಿ, ನಿರ್ದಿಷ್ಟ ಉಪಬಂಧ ಇಲ್ಲದಿರುವಲ್ಲಿ, ನ್ಯಾಯಾಲಯವು ಏಕಕಾಲದ ಜಾರಿಯನ್ನು ನಿರಾಕರಿಸುವ ಯಾವುದೇ ವಿವೇಚನೆಯನ್ನು ಹೊಂದಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

7. ನಮ್ಮ ಪ್ರಕಾರ, ಕಾನೂನಿನಲ್ಲಿ ಡಿಕ್ರಿಧಾರಕನು, ಪ್ರತಿ ಅರ್ಜಿಯಲ್ಲಿನ ಜಾರಿಯು, ಆ ಅರ್ಜಿಯಲ್ಲಿನ ಸಂಬಂಧಪಟ್ಟ ಪ್ರತ್ಯರ್ಜಿದಾರರಿಂದ ಬರಬೇಕಾದ ಬಾಕಿ, ಬರಬೇಕಾದ ಡಿಕ್ರಿ ಮೊಬಲಗಿಗಾಗಿ ಮಾತ್ರ ಸಂಬಂಧಪಟ್ಟಿರುತ್ತದೆಂಬುದು ಸ್ಪಷ್ಟವಾದಾಗ ಮಾತ್ರ ಎರಡು ಜಾರಿ ಅರ್ಜಿಗಳನ್ನು ಸಲ್ಲಿಸಬಹುದು. ಪ್ರತಿಯೊಬ್ಬರಿಂದಲೂ (ಇಬ್ಬರೂ ಪ್ರತ್ಯರ್ಜಿದಾರರು) ಡಿಕ್ರಿಯ ಸಂಪೂರ್ಣ

ಮೊಬಲಗು ಬಾಕಿಯಿದೆ ಎಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ, 1957ರ ಜಾರಿ ಅರ್ಜಿ ಸಂ.42ನ್ನು ಎರಡನೇ ಪ್ರತ್ಯರ್ಜಿದಾರನ ವಿರುದ್ಧ ಸಲ್ಲಿಸಿದಾಗ, ಖಂಡಿತವಾಗಿ, ತರುವಾಯದ ಬಡ್ಡಿ ಹಾಗೂ ವೆಚ್ಚಗಳೊಂದಿಗೆ 19,282–12–3 ರೂ.ಗಳ ಸಂಪೂರ್ಣ ಮೊಬಲಗು ಎರಡನೇ ಪ್ರತ್ಯರ್ಜಿದಾರನಿಂದ ಬಂದ ಡಿಕ್ರಿಗೆ ಸಂಬಂಧಿಸಿದಂತೆ ಬಾಕಿಯಿರುತ್ತದೆ ಹಾಗೂ ಬಡ್ಡಿ ಹಾಗೂ ವೆಚ್ಚಗಳೊಂದಿಗಿನ 14,619–13–7ರೂ.ಗಳ ಸಂಪೂರ್ಣ ಮೊಬಲಗು ಮೊದಲನೇ ಪ್ರತ್ಯರ್ಜಿದಾರರಿಂದ ಬಂದ ಡಿಕ್ರಿಗೆ ಸಂಬಂಧಿಸಿದಂತೆ ಬಾಕಿಯಿರುತ್ತದೆಂಬುದು ಪ್ರತೀ ತೀರ್ಪು – ಋಣಿಯ ವಿರುದ್ಧ ಸಲ್ಲಿಸಿದ ಪ್ರತೀ ಜಾರಿ ಅರ್ಜಿಯು, ಶೇ.ನೂರರಷ್ಟು ಯಶಸ್ಸನ್ನು ಪಡೆಯುತ್ತದೆ ಹಾಗೂ ಆ ಮೂಲಕ ಇದು ಡಿಕ್ರಿಯುಡಿಯಲ್ಲಿನ ಇಡೀ ಬಾಕಿ ಮೊಬಲಗಿನ ವಾಸ್ತವೀಕರಣದಲ್ಲಿ ಪರ್ಯಾವಸನಗೊಳ್ಳುತ್ತದೆಂದು ಇದು ಒಂದು ಸಂದರ್ಭವನ್ನು ಪರಿಭಾವಿಸುವಂತಿರುವುದಿಲ್ಲ.

ಜಾರಿ ಅರ್ಜಿಗಳನ್ನು ಸಲ್ಲಿಸುವ ಹಾಗೂ ಮುಕ್ತಾಯಗೊಳಿಸುವ ನಡುವೆ ಹಲವಾರು ತಪ್ಪುಗಳಿರುತ್ತವೆ ಹಾಗೂ ಡಿಕ್ರಿಧಾರಕನು ಸಾಮಾನ್ಯವಾಗಿ, ಸಂಪೂರ್ಣವಾಗಿ ಯಶಸ್ವಿಯಾಗದ ಜಾರಿ ಅರ್ಜಿಯ ಅವಕಾಶವನ್ನು ಮುಖಾಮುಖಿಯಾಗಬೇಕಾಗುತ್ತದೆ. ಇವರು ವಿಷಯದ ಪ್ರಾಯೋಗಿಕ ದೃಷ್ಟಿಕೋನವನ್ನು ಇಟ್ಟುಕೊಂಡು, ಈ ಅರ್ಜಿಯಲ್ಲಿ ಕಟ್ಟುನಿಟ್ಟಿನ ಸ್ಪರ್ಧೆಯನ್ನು ಎದುರಿಸಬೇಕು ಹಾಗೂ ಈ ಅರ್ಜಿಯಲ್ಲಿ ತೀರ್ಪು – ಋಣಿಗಳ ಮೂಲಕ

> ಮಂಡಿಸಿದಂಥ ಪ್ರಯತ್ನ, ನೈಜತೆ ಮತ್ತು ತಂತ್ರಗಾರಿಕೆಗಳು ಹೆಚ್ಚಿನ ಮಹತ್ವವುಳ್ಳವಾಗಿರುತ್ತವೆ ಹಾಗೂ ಸಂಪೂರ್ಣವಾಗಿ ಅಥವಾ ಭಾಗಶಃ ಡಿಕ್ರಿಯು ವಾಸ್ತವಿಕತೆಯನ್ನು ಹರಣಮಾಡುತ್ತವೆಂಬ ನಿರಾಕರಿಸಲಾಗದ ವಾಸ್ತವಾಂಶವನ್ನು ಒಪ್ಪಿಕೊಳ್ಳಬೇಕಾಗಿರುತ್ತದೆ. ದಾವೆಗಳಲ್ಲಿ ಮಾತ್ರವಲ್ಲದೆ, ಜಾರಿ ಅರ್ಜಿಗಳಲ್ಲೂ ಕೂಡ, ವಾಸ್ತವಾಂಶ ಹಾಗೂ ಕಾನೂನಿನ ಎಲ್ಲಾ ಶಕ್ಯ ಸಾಲುಗಳು ಎದುರು ಪಕ್ಷಕಾರರ ವೆಚ್ಚದಲ್ಲಿ ಸ್ವತಃ ಯಶಸ್ಸನ್ನು ಪಡೆಯಲು ಸಂಬಂಧಪಟ್ಟ ಪಕ್ಷಕಾರರಿಂದ ಪಡೆದುಕೊಳ್ಳಬಹುದೆಂಬುದು ತೀರಾ ಸಾಮಾನ್ಯವಾದುದಾಗಿದೆ. ತರುವಾಯ, ಸ್ವಲ್ಪ ಮಟ್ಟಿಗಿನ ಮೊಬಲಗನ್ನು, ವಾಸ್ತವಿಕ ಮೊಬಲಗಿಗೆ ಸಮನಾಗಿದೆಯೆಂದು ಸಲ್ಲಿಸಿದಂಥ ಜಾರಿ ಅರ್ಜಿಯನ್ನು ಪರಿಗಣಿಸಲು ಡಿಕ್ರಿಧಾರಕನನ್ನು ಕಾನೂನು ಒತ್ತಾಯಪಡಿಸಿದಲ್ಲಿ, ಅದು ಮೊಟ್ಟೆಯನ್ನು ಕಾವಿಗೆ ಹಾಕುವ ಮೊದಲು ಕೋಳಿ ಪಿಳ್ಳೆಗಳನ್ನು ಎಣಿಸಲು ಆತನನ್ನು ಒತ್ತಾಯಿಸಿದಂತಾಗುತ್ತದೆ. ನಮಗೆ ಅಪೀಲುದಾರನ ಪರವಾಗಿ ಉದ್ಭವಿಸಿದ ವಾದಗಳು ಸಮರ್ಥನೀಯವಾಗಿರುವುದಿಲ್ಲವೆಂಬುದು ಹಾಗೂ ಅಧೀನ ನ್ಯಾಯಾಲಯಗಳು ತಳೆದ ತೀರ್ಮಾನಗಳನ್ನು ಒಪ್ಪಿಕೊಳ್ಳಬೇಕೆಂಬುದು ಕಂಡುಬರುತ್ತದೆ.
>
> (ನನ್ನಿಂದ ಒತ್ತು ನೀಡಲಾಗಿರುತ್ತದೆ)

16. ಪ್ರಧಾನ ಸಾಲಗಾರನೊಂದಿಗಿನ ಭದ್ರತೆಯ ಬದ್ಧತೆಯು ಸಹ ವ್ಯಾಪಕತೆಯನ್ನು ಹೊಂದಿದ್ದು, ಒಂದೇ ವ್ಯವಹರಣೆಯಿಂದ ಅದು ಉದ್ಭವಿಸಿದಾಗ್ಯೂ, ಅವರು ಪ್ರತ್ಯೇಕ ಬದ್ಧತೆಗಳಾಗಿದ್ದು, ಒಂದೇ ವ್ಯವಹರಣೆಯಿಂದ ಅವರು ರೂಪಿಸಲ್ಪಟ್ಟಿದ್ದರೂ, ಅವರ ಬದ್ಧತೆಯು ಪ್ರತ್ಯೇಕ ಹಾಗೂ ಭಿನ್ನ ಸ್ವರೂಪದಲ್ಲಿರುತ್ತದೆಂಬ ಪ್ರಸ್ತಾವಕ್ಕೆ ಯಾವುದೇ ಭಿನ್ನಾಭಿಪ್ರಾಯವಿರುವುದಿಲ್ಲ.

***ಹುಕುಮ್‌ಚಂದ್ ಇನ್ಸೂರೆನ್ಸ್ ಕಂ. ಲಿ. –ವಿರುದ್ಧ– ಬ್ಯಾಂಕ್ ಆಫ್ ಬರೋಡ ಮತ್ತು ಇತರರು (ಮೇಲಿನಂತೆ)*** ಪ್ರಕರಣದಲ್ಲಿನ ವಿಭಾಗೀಯ ಪೀಠದ ತೀರ್ಪಿನ ಸದರಿ ಪೂರ್ವ ಪ್ರಸ್ತಾವಕ್ಕೆ ಸಂಬಂಧಿಸಿದಂತೆ, ಇದರಡಿಯಲ್ಲಿ, ಪ್ರಧಾನ ಸಾಲಗಾರನ ಬದ್ಧತೆ ಹಾಗೂ ಖಾತರಿಯ ಬದ್ಧತೆಗಳು, ಹಿಂದಿನದರೊಂದಿಗೆ ಸಹ–ವ್ಯಾಪಕತೆಯನ್ನು ಹೊಂದಿದ್ದು, ಅದು ಒಂದೇ ವ್ಯವಹರಣೆಯಿಂದ ಉದ್ಭವಿಸಿದಾಗ್ಯೂ ಅವರು ವಾಸ್ತವವಾಗಿ ಪ್ರತ್ಯೇಕ ಬದ್ಧತೆಯನ್ನು ಹೊಂದಿರುತ್ತಾರೆಂದು ಅಭಿಪ್ರಾಯಪಡಲಾಗಿರುತ್ತದೆ. ವಿಭಾಗೀಯ ಪೀಠವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> "12. ಅಂಶ (ಡಿ): ವಾಸ್ತವವಾದ ಭದ್ರತೆಯು ಅನುಮತೀಯವಾಗಿರುತ್ತದೆಂಬುದರಲ್ಲಿ ಯಾವುದೇ ಸಂಶಯವಿರುವುದಿಲ್ಲ.
>
> ಭದ್ರತೆಯ ಬದ್ಧತೆಗೆ ಸಂಬಂಧಿಸಿದ ಪ್ರಶ್ನೆಯು ಇದರ ಜಾರಿಯ ವ್ಯಾಪ್ತಿ ಹಾಗೂ ರೀತಿಯನ್ನು ಭದ್ರತತ್ವದ ಸ್ವರೂಪ ಹಾಗೂ ಪ್ರಸಂಗಗಳಿಗನುಸಾರವಾಗಿ, ಮೊದಲ ತತ್ವಗಳ ಮೇಲೆ ನಿರ್ಧರಿಸಬೇಕಾಗುತ್ತದೆ. ಪ್ರಧಾನ ಸಾಲಗಾರನ ಬದ್ಧತೆ ಹಾಗೂ ಖಾತರಿಯ ಬದ್ಧತೆಯು, ಒಂದೇ ವ್ಯವಹರಣೆಯಿಂದ ಉದ್ಭವಿಸಿದಾಗ್ಯೂ, ವಾಸ್ತವಿಕವಾಗಿ ಹಿಂದಿನದು ಪ್ರತ್ಯೇಕ ಬದ್ಧತೆಯೊಂದಿಗೆ ಸಹ ವ್ಯಾಪಕತೆಯನ್ನು ಹೊಂದಿರುತ್ತದೆ. ಅಲ್ಲದೆ ಭದ್ರತೆಯ ಬದ್ಧತೆಯು ಏಕಕಾಲಕ್ಕೆ ಎಲ್ಲಾ ಪ್ರಕರಣಗಳಲ್ಲಿ ಉದ್ಭವವಾಗುವುದಿಲ್ಲ. ಇದರ ಪೂರ್ವ ಪ್ರಸ್ತಾವವು ಇಂಗ್ಲೆಂಡಿನ ಹಾಲ್‌ಬರೀಸ್ ಲಾ ಆಫ್ ಇಂಗ್ಲೆಂಡ್ (ಮೂರನೇ ಮುದ್ರಣ, ಸಂಪುಟ 22, ಪ್ಯಾರಾ 819)ನಿಂದ

ಒಂದು ಪ್ಯಾರಾದಲ್ಲಿರುವ ಬೆಂಬಲವನ್ನು ಕಂಡುಕೊಳ್ಳಬಹುದಾಗಿದೆ.

17. ಎಐಆರ್ 1961 ಎಪಿ 63ರಲ್ಲಿ ವರದಿಯಾದ ಚುನಿಲಾಲ್‌ನ ವ್ಯವಸ್ಥಾಪಕ ಪಾಲುದಾರನ ಮೂಲಕ ***ಬೆಥಿಯಾ ವೆಂಕನ್ನ –ವಿರುದ್ಧ– ಸೇಠ್ ಚುನಿಲಾಲ್ ಮೂಲ್‌ಚಂದ್ ರಿಜಿಸ್ಟರ್ಡ್ ಫರ್ಮ್, ಕಾಕಿನಾಡ*** ಪ್ರಕರಣದಲ್ಲಿ ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ತೀರ್ಪಿಗೆ ವರದಿಯಾದ ***ರಾಮ್ ನಾರಾಯಣ್ ಬಟದ್ –ವಿರುದ್ಧ– ವಿಮಲಾ ಜಾವರ್ ಮತ್ತು ಇತರೆ ಆರು ಜನರು*** [8] ಪ್ರಕರಣದಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು, ಡಿಕ್ರಿಯನ್ನು ಹೊರಡಿಸಿದಂಥ ನ್ಯಾಯಾಲಯ ಹಾಗೂ ಇಂಥ ಡಿಕ್ರಿಯನ್ನು ವರ್ಗಾವಣೆ ಮಾಡಿದಂಥ ನ್ಯಾಯಾಲಯದ ಎದುರು ಡಿಕ್ರಿ ಧಾರಕನು ಡಿಕ್ರಿಯ ಏಕರೂಪದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಪಡೆಯಬೇಕಾದ ಅನುಮತಿಯನ್ನು ಅಗತ್ಯಪಡಿಸಿದಂಥ ಕಾನೂನಿನ ನಿರ್ದಿಷ್ಟ ಉಪಬಂಧವಿರುವುದಿಲ್ಲವೆಂದೂ ಅಭಿಪ್ರಾಯಪಟ್ಟು ಡಿಕ್ರಿಧಾರಕನ ಡಿಕ್ರಿಯ ಜಾರಿಯಲ್ಲಿ ಒಂದೇ ಮೊಬಲಗಿಗೆ ಸಂಬಂಧಿಸಿದಂತೆ ಬೇರೆ ಬೇರೆ ತೀರ್ಪುಋಣಿಗಳ ವಿರುದ್ಧ ಏಕಕಾಲದಲ್ಲಿ ಮುಂದುವರೆಯಲು ಕಾನೂನಿನಡಿಯಲ್ಲಿ ಈತ ಹಕ್ಕುಳ್ಳವನಾಗಿದ್ದು, ಇಂತಹ ಸಂದರ್ಭದಲ್ಲಿ ನ್ಯಾಯಾಲಯದ ನಿರ್ದಿಷ್ಟ ಅನುಮತಿಯು, ಅಗತ್ಯವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 22ನೇ ನಿಯಮದ 21ನೇ ಆದೇಶದಡಿಯಲ್ಲಿ ಇದನ್ನು ಪರೀಕ್ಷಿಸಿದ್ದಾಗ್ಯೂ, ಜಾರಿ ಅರ್ಜಿಯನ್ನು ಸಲ್ಲಿಸಿದಾಗ, ತೀರ್ಪು ಋಣಿಗಳಿಗೆ ನೋಟೀಸನ್ನು ಕಳುಹಿಸಬೇಕಾದ ಅವಶ್ಯಕತೆ ಇದೆಯೆ ಅಥವಾ ಇಲ್ಲವೆ ಎಂಬುದನ್ನು ಕಂಡುಕೊಳ್ಳಬೇಕಾಗಿರುತ್ತದೆ. ಮೂಲದಲ್ಲಿ, ಒಂದೇ ತೀರ್ಪು ಹಾಗೂ ಡಿಕ್ರಿಯಿಂದ ಉದ್ಭವಿಸಿದ ಡಿಕ್ರಿಧಾರಕನು ಸಲ್ಲಿಸಿದ ಎರಡು ಏಕಕಾಲೀನ ಅರ್ಜಿಗಳು ಊರ್ಜಿತವಾಗಿರುತ್ತವೆಂದು ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಅಭಿಪ್ರಾಯಪಟ್ಟಿರುತ್ತದೆ.

8. 2002(1) ಸಿಟಿಸಿ 48

18. ಈ ಹಿಂದೆ ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಹಾಗೂ ***ಬೆಥಿಯಾ ವೆಂಕನ್ನ*** ಪ್ರಕರಣದಲ್ಲಿ ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ವಿಧಿಸಿದ ಕಾನೂನಿನ ಹಿನ್ನೆಲೆಯಲ್ಲಿ, ಏಕಕಾಲದಲ್ಲಿ ಬೇರೆ ಬೇರೆ ತೀರ್ಪು ಋಣಿಗಳ ವಿರುದ್ಧ ಮುಂದುವರೆಯಲು ಡಿಕ್ರಿಧಾರಕರು ಹಕ್ಕುಳ್ಳವರಾಗಿರುತ್ತಾರೆಂದು ಹಾಗೂ ಪ್ರಸ್ತುತ ಪ್ರಕರಣದಲ್ಲಿ ನಿರ್ದಿಷ್ಟವಾಗಿ ಪ್ರತ್ಯೇಕವಾಗಿರುವ ತೀರ್ಪು ಋಣಿಗಳು ಹಾಗೂ ಪ್ರತ್ಯೇಕವಾಗಿರುವ ಡಿಕ್ರಿಗಳು ರಿಟ್ ಅರ್ಜಿ 32399/2015, ರಿಟ್ ಅರ್ಜಿ 32400/2015, ರಿಟ್ ಅರ್ಜಿ 32403/2015 ಮತ್ತು ರಿಟ್ ಅರ್ಜಿ 32405/2015 ಗಳಲ್ಲಿ ಡಿಕ್ರಿಧಾರಕರು ಸಲ್ಲಿಸಿದ ಎರಡು ಜಾರಿ ಅರ್ಜಿಗಳನ್ನು ಅವಶ್ಯಕವಾಗಿ ಊರ್ಜಿತವಾಗಿವೆಯೆಂದು ಅಭಿಪ್ರಾಯಪಡಬೇಕಾಗಿದ್ದು, ಇದು ಜಾರಿ ಅರ್ಜಿ ಸಂಖ್ಯೆ 1267, 1268, 1274 ಮತ್ತು 1276/2014 ಇವುಗಳಲ್ಲಿ ಜಾರಿ ನ್ಯಾಯಾಲಯವು ನೀಡಿದ ನಿರ್ಣಯವೂ ಇದಾಗಿರುತ್ತದೆ. ಆದಾಗ್ಯೂ, ಜಾರಿ ಅರ್ಜಿಗಳನ್ನು ತಿದ್ದುಪಡಿ ಮಾಡಲು ಡಿಕ್ರಿಧಾರಕನಿಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಇದರಿಂದ, ಪ್ರಧಾನ ಸಾಲಗಾರ ಹಾಗೂ ಖಾತರಿದಾರನ ವಿರುದ್ಧ ಸಲ್ಲಿಸಿದ ಏಕಕಾಲೀನ ಅರ್ಜಿಗಳಲ್ಲಿ ಕ್ಲೇಮು ಮಾಡಿದ ಮೊಬಲಗು ಅರ್ಧದಷ್ಟಿರುವ ಕ್ಲೇಮಿನಲ್ಲಿ ಕಂಡು ಬಂದಿದ್ದು, ಇದು ಅನುಮತೀಯವಾಗಿರುವುದಿಲ್ಲ. 07.04.2016ರಂದು ಡಿಕ್ರಿಧಾರಕನ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು ನೀಡಿದ ಮುಚ್ಚಳಿಕೆಯ ಹಿನ್ನೆಲೆಯಲ್ಲಿ, ಏಕಕಾಲೀನ ಅರ್ಜಿಗಳು ಊರ್ಜಿತವಾಗುವುದಿಲ್ಲವೆಂಬ ಅಭಿಪ್ರಾಯದ ಉದ್ದೇಶಕ್ಕೆ ಸಂಬಂಧಿಸಿದಂತೆ ಒಪ್ಪಿಕೊಳ್ಳಬೇಕೆಂದು ಅಪೇಕ್ಷಿಸುವ ಒಟ್ಟು ಕ್ಲೇಮಿನಿಂದ ವಜಾಮಾಡಲು ಅಥವಾ ಕಡಿತಗೊಳಿಸುವ ಸಂಬಂಧಪಟ್ಟ ಅರ್ಜಿಗಳಲ್ಲಿ ಕ್ಲೇಮು ಮಾಡಿದ ತೀರ್ಪು ಋಣಿಗಳ ಮೊಬಲಗಿನಿಂದಾಗಲೀ ಇಲ್ಲವೆ ಇತರ ಮೂಲದಿಂದಾಗಲೀ ಯಾವುದೇ ಮೊಬಲಗನ್ನು ವಾಸ್ತವಗೊಳಿಸುವುದು ಡಿಕ್ರಿಧಾರಕನ ಸಂದರ್ಭದಲ್ಲಿ ಪರಿಣಾಮಕಾರಿಯಾಗಿರುತ್ತದೆ. ಕೇವಲ ಶೇ.50ರಷ್ಟರ ಮಟ್ಟಿಗೆ ಈ ಎಲ್ಲಾ ಜಾರಿ ಅರ್ಜಿಗಳಲ್ಲಿ ಡಿಕ್ರಿಧಾರಕರ ಕ್ಲೇಮನ್ನು ನಿರ್ಬಂಧಿಸಲು ಅವರನ್ನು ಅಗತ್ಯಪಡಿಸಲಾಗಿದೆಯೆಂಬ ವಾದಕ್ಕೆ ಪೂರಕವಾಗಿ ತೀರ್ಪು ಋಣಿಗಳನ್ನು ಸುನಾವಣೆ ಮಾಡಿರುವುದಿಲ್ಲ. ಆದಾಗ್ಯೂ, ಕೈಗೂಡಿದ

ಮೊಬಲಗಿನ ವಾಸ್ತವಾಂಶಗಳನ್ನು ಡಿಕ್ರಿಧಾರಕರು ಗೌಣಗೊಳಿಸಬಹುದೆಂಬ ತೀರ್ಪು ಋಣಿಗಳ ನಿರೀಕ್ಷೆಗೆ ಅನುಗುಣವಾಗಿ ಯಾವುದೇ ಜಾರಿ ಅರ್ಜಿಗಳಲ್ಲಿ ಅಂದರೆ ಸಾಲಗಾರ ಅಥವಾ ಖಾತರಿದಾರನ ವಿರುದ್ಧ ಸಲ್ಲಿಸಿದ ಅರ್ಜಿಗಳಲ್ಲಿ ಮೊಬಲಗು ಕೈಗೂಡಿದಂತೆ ಹಾಗೂ ಕೈಗೂಡಿದಾಗ, ಸಂಬಂಧಪಟ್ಟ ತೀರ್ಪು ಋಣಿಗಳಿಂದ ಕೈಗೂಡಿದ ಅಥವಾ ಸ್ವೀಕರಿಸಿದ ಅಥವಾ ವಸೂಲಿ ಮಾಡಿದ ಮೊಬಲಗನ್ನು ಸೂಚಿಸುವ ಮೆಮೊವನ್ನು ಅವರು ಸಲ್ಲಿಸಿರುತ್ತಾರೆಂದೂ, ಅದರಡಿಯಲ್ಲಿ ಸೂಚಿಸಿರುವ ಮುಚ್ಚಳಿಕೆಯ ಅಫಿಡಾವಿಟ್ಟನ್ನು ಸಲ್ಲಿಸಲು ಡಿಕ್ರಿಧಾರಕರನ್ನು ನಿರ್ದೇಶಿಸುವಲ್ಲಿ ಇದು ತನ್ನ ಗುರಿ ಸಾಧಿಸುತ್ತದೆ. ಇದರಿಂದ ಪ್ರಶ್ನಿತ ಆದೇಶಗಳು ಊರ್ಜಿತವಾಗಿರುವುದಿಲ್ಲ.

19. ವಾಸ್ತವಾಂಶಗಳ ಮೇಲೆ, ಡಿಕ್ರಿಧಾರಕರು ಅಂದರೆ ಮೆ॥ ಪಿಎಎಫ್‌ಸಿಒ 2916 ಐಎನ್‌ಸಿ, ಮೆ॥ ಪಿಎಎಫ್‌ಸಿಒ 2919 ಎಎನ್‌ಸಿ ಎಡಬ್ಲ್ಯೂಎಎಸ್ ಐರ್ಲ್ಯಾಂಡ್ ಲೀಸಿಂಗ್ ತ್ರೀ ಲಿ. ಹಾಗೂ ಜೆಬಿ 2443 ಐಎನ್‌ಸಿ (ಯುಎಸ್‌ಎ)ಗಳು, ಈ ಮುಂದೆ ಸೂಚಿಸಲಾದಂಥ ಡಿಕ್ರಿಧಾರಕರ –ವಿರುದ್ಧ– ಆರು ಜಾರಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ, ಅವು ಈ ಮುಂದಿನಂತಿವೆ:

| ಜಾರಿ ಅರ್ಜಿಗಳ ಸಂಖ್ಯೆ | ಡಿಕ್ರಿದಾರಕರ ಹೆಸರು | ತೀರ್ಪುಋಣಿಯ ಹೆಸರು | ತೀರ್ಪಿನಲ್ಲಿ ತೀರ್ಪುಋಣಿಯ ದರ್ಜೆ |
|---|---|---|---|
| 1272/2014 | ಜೆಬಿ 2443 ಐಎನ್‌ಸಿ (ಯುಎಸ್‌ಎ) | ಯುನೈಟೆಡ್ ಬ್ರೇವರೀಸ್ (ಹೋಲ್ಡಿಂಗ್ಸ್)ಲಿ. | ಪ್ರತಿವಾದಿ – ಖಾತರಿದಾರ |
| 1269/2014 | ಜೆಬಿ 2443 ಐಎನ್‌ಸಿ (ಯುಎಸ್‌ಎ) | ಕಿಂಗ್‌ಫಿಷರ್ ಏರ್‌ಲೈನ್ಸ್ | ಪ್ರತಿವಾದಿ – ಪ್ರಧಾನ ಸಾಲಗಾರ |

| | | | |
|---|---|---|---|
| 1273/2014 | ಎಡಬ್ಲ್ಯೂಎಎಸ್ ಐರ್ಲ್ಯಾಂಡ್ ಲೀಸಿಂಗ್ ತ್ರೀ ಲಿ. | ಯುನೈಟೆಡ್ ಬ್ರೇವರೀಸ್ (ಹೋಲ್ಡಿಂಗ್ಸ್)ಲಿ. | ಪ್ರತಿವಾದಿ – ಖಾತರಿದಾರ |
| 1270/2014 | ಎಡಬ್ಲ್ಯೂಎಎಸ್ ಐರ್ಲ್ಯಾಂಡ್ ಲೀಸಿಂಗ್ ತ್ರೀ ಲಿ. | ಕಿಂಗ್‌ಫಿಷರ್ ಏರ್‌ಲೈನ್ಸ್ | ಪ್ರತಿವಾದಿ – ಪ್ರಧಾನ ಸಾಲಗಾರ |
| 1275/2014 | ಎಡಬ್ಲ್ಯೂಎಎಸ್ ಐರ್ಲ್ಯಾಂಡ್ ಲೀಸಿಂಗ್ ತ್ರೀ ಲಿ. | ಯುನೈಟೆಡ್ ಬ್ರೇವರೀಸ್ (ಹೋಲ್ಡಿಂಗ್ಸ್)ಲಿ. | ಪ್ರತಿವಾದಿ – ಖಾತರಿದಾರ |
| 1271/2014 | ಎಡಬ್ಲ್ಯೂಎಎಸ್ ಐರ್ಲ್ಯಾಂಡ್ ಲೀಸಿಂಗ್ ತ್ರೀ ಲಿ. | ಕಿಂಗ್‌ಫಿಷರ್ ಏರ್‌ಲೈನ್ಸ್ | ಪ್ರತಿವಾದಿ – ಪ್ರಧಾನ ಸಾಲಗಾರ |
| 1274/2014 | ಪಿಎಎಫ್‌ಸಿಒ 2916 ಐಎನ್‌ಸಿ | ಯುನೈಟೆಡ್ ಬ್ರೇವರೀಸ್ (ಹೋಲ್ಡಿಂಗ್ಸ್)ಲಿ. | ಪ್ರತಿವಾದಿ – ಖಾತರಿದಾರ |
| 1267/2014 | ಪಿಎಎಫ್‌ಸಿಒ 2916 ಐಎನ್‌ಸಿ | ಕಿಂಗ್‌ಫಿಷರ್ ಏರ್‌ಲೈನ್ಸ್ | ಪ್ರತಿವಾದಿ – ಪ್ರಧಾನ ಸಾಲಗಾರ |
| 1276/2014 | ಪಿಎಎಫ್‌ಸಿಒ 2919 ಐಎನ್‌ಸಿ | ಯುನೈಟೆಡ್ ಬ್ರೇವರೀಸ್ (ಹೋಲ್ಡಿಂಗ್ಸ್)ಲಿ. | ಪ್ರತಿವಾದಿ – ಖಾತರಿದಾರ |
| 1268/2014 | ಪಿಎಎಫ್‌ಸಿಒ 2919 ಐಎನ್‌ಸಿ | ಕಿಂಗ್‌ಫಿಷರ್ ಏರ್‌ಲೈನ್ಸ್ | ಪ್ರತಿವಾದಿ – ಪ್ರಧಾನ ಸಾಲಗಾರ |

ಹಾಗಾಗಿ, ಎರಡು ಬೇರೆ ಬೇರೆ ಜಾರಿ ಅರ್ಜಿಗಳನ್ನು ಏಕಕಾಲದಲ್ಲಿ ಸಲ್ಲಿಸುವ ಮೂಲಕ ಪ್ರದಾನ ಸಾಲಗಾರ ಹಾಗೂ ಖಾತರಿದಾರನ ವಿರುದ್ಧ ಎರಡು ಜಾರಿ ಅರ್ಜಿಗಳನ್ನು ಸಲ್ಲಿಸುವ ಮೂಲಕ ಡಿಕ್ರಿಯನ್ನು ಜಾರಿಗೊಳಿಸಲು ಡಿಕ್ರಿಧಾರಕನು ಮುಂದುವರೆಯುತ್ತಾನೆಂಬುದು ಮೇಲೆ ಉಲ್ಲೇಖಿಸಿದ ಟ್ಯಾಬುಲರ್ ಅಂಕಣದಿಂದ ಕಾಣಬಹುದಾಗಿರುತ್ತದೆ.

20. ಸಿವಿಲ್ ಪ್ರಕ್ರಿಯಾ ಸಂಹಿತೆಯ 11ನೇ ನಿಯಮದ 21ನೇ ಕ್ರಮಾದೇಶದಡಿಯಲ್ಲಿ, ಡಿಕ್ರಿಧಾರಕನು, ಈ ಮೇಲೆ ಈಗಾಗಲೇ ಚರ್ಚಿಸಿದಂತೆ ತನ್ನ ಡಿಕ್ರಿಯ ಅನುಷ್ಠಾನದಲ್ಲಿ ಬೇರೆ ಬೇರೆ ತೀರ್ಪು ಋಣಿಗಳ ವಿರುದ್ಧ ಏಕಕಾಲಕ್ಕೆ ಮುಂದುವರೆಯಲು ಹಕ್ಕುಳ್ಳವನಾಗಿರುತ್ತಾನೆ. ಡಿಕ್ರಿಯ ಜಾರಿಗೆ ಹಲವಾರು ಅರ್ಜಿಗಳನ್ನು ಏಕಕಾಲದಲ್ಲಿ ಸಲ್ಲಿಸಲಾಗುವುದಿಲ್ಲವೆಂದು ಧನಾತ್ಮಕವಾಗಿ ವಿಧಿಸಿದಂಥ ಯಾವುದೇ ಅಂಶವು ಸಿವಿಲ್ ಪ್ರಕ್ರಿಯಾ ಸಂಹಿತೆ ಅಥವಾ ಯಾವುದೇ ಇತರೆ ಕಾನೂನಿನಲ್ಲಿ ಇರುವುದಿಲ್ಲ. ಪ್ರಕ್ರಿಯಾ ನಿಯಮಗಳು ನ್ಯಾಯದ ಉದ್ದೇಶಕ್ಕಾಗಿಯೇ ರೂಪಿಸಿದಂತವಾಗಿವೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ (2)(ಇ) 11ನೇ ನಿಯಮದ 21ನೇ ಕ್ರಮಾದೇಶವು, ಡಿಕ್ರಿಯ ತರುವಾಯ ಪಕ್ಷಕಾರರ ನಡುವೆ ನಡೆಸಲಾದ ವಿವಾದಿತ ವಿಷಯದ ಯಾವುದೇ ಮತ್ತು (ಯಾವುದಾದರೂ ಇದ್ದಲ್ಲಿ) ಯಾವ ಸಂದಾಯ ಅಥವಾ ಇತರೆ ಹೊಂದಾಣಿಕೆ ಮಾಡಲಾಗಿದೆಯೆ ಎಂಬುದನ್ನು ಹಾಗೂ ಡಿಕ್ರಿಧಾರಕನು ಇತ್ಯರ್ಥದಲ್ಲಿರುವ ಯಾವುದೇ ಇತರೆ ಜಾರಿ ಅರ್ಜಿಯನ್ನು ಸಲ್ಲಿಸಿದ್ದಕ್ಕೆ ಸಂಬಂಧಿಸಿದ ಮೊಬಲಗನ್ನು ಡಿಕ್ರಿಧಾರಕನು ಜಾರಿ ಅರ್ಜಿಯಲ್ಲಿ ಸೂಚಿಸಬೇಕೆಂಬುದನ್ನು ಆಜ್ಞಾಪಿಸುತ್ತದೆ. ಆದಾಗ್ಯೂ, ಸಿವಿಲ್ ಪ್ರಕ್ರಿಯಾ ಸಂಹಿತೆಯ 2(ಎಫ್) ನಿಯಮದ 21ನೇ ಕ್ರಮಾದೇಶದಲ್ಲಿ ಡಿಕ್ರಿಧಾರಕನು, ಈ ಹಿಂದೆ ಡಿಕ್ರಿಯ ಜಾರಿಗಾಗಿ ಯಾವುದೇ ಹಾಗೂ (ಯಾವುದಾದರೂ ಇದ್ದಲ್ಲಿ) ಎಷ್ಟು ಅರ್ಜಿಗಳನ್ನು ಸಲ್ಲಿಸಿದ್ದನು, ಅಂಥ ಅರ್ಜಿಗಳನ್ನು ಸಲ್ಲಿಸಿದ ದಿನಾಂಕಗಳು ಹಾಗೂ ಅವುಗಳ ಫಲಿತಾಂಶಗಳನ್ನು ಹೇಳಬೇಕಾಗಿರುತ್ತದೆ. ಹಾಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 11ನೇ ನಿಯಮದಡಿಯಲ್ಲಿ 21ನೇ ಕ್ರಮಾದೇಶವು ಏಕರೂಪದ ಜಾರಿಯನ್ನು ನಿಷೇಧಿಸುವುದಿಲ್ಲವೆಂದು ಇದು ಸೂಚಿಸುತ್ತದೆ. ಆದಾಗ್ಯೂ, ಸಲ್ಲಿಸುವ ಎರಡು

ಜಾರಿ ಅರ್ಜಿಗಳ ಸಂದರ್ಭದಲ್ಲಿ ಅಂದರೆ, ತೀರ್ಪುಋಣಿಯ ದಸ್ತಗಿರಿಗೆ ಸಂಬಂಧಿಸಿದಂತೆ ಒಂದು ಅರ್ಜಿಯನ್ನು ಹಾಗೂ ಇತರೆ ಜಾರಿ ಅರ್ಜಿಯನ್ನು, ಅದೇ ತೀರ್ಪುಋಣಿಯ ಸ್ವತ್ತಿಗೆ ವಿರುದ್ಧವಾಗಿ ಮುಂದುವರೆಸಲು ಸಲ್ಲಿಸಲಾಗಿದ್ದು, ತರುವಾಯ ಅಂಥ ಪರಿಸ್ಥಿತಿಯಲ್ಲಿ, ಜಾರಿ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆಯ 30ನೇ ನಿಯಮದ 21ನೇ ಕ್ರಮಾದೇಶದಲ್ಲಿ ಸೂಚಿಸಲಾದಂಥ ಇದೇ ಸಮಯದಲ್ಲಿ ಸದರಿ ತೀರ್ಪು ಋಣಿಯ ವ್ಯಕ್ತಿ ಹಾಗೂ ಸ್ವತ್ತಿನ ವಿರುದ್ಧದ ಜಾರಿಯನ್ನು ತಿರಸ್ಕರಿಸಬಹುದು.

21. ಒಟ್ಟಾರೆಯಾಗಿ, ಡಿಕ್ರಿಧಾರಕರ ವಿರುದ್ಧ ಜಂಟಿಯಾಗಿ ಹಾಗೂ ಹಲವಾರು ತೀರ್ಪು ಹಾಗೂ ಡಿಕ್ರಿಗಳನ್ನು ಹೊರಡಿಸಿದಾಗ ಇಬ್ಬರು ತೀರ್ಪು ಋಣಿಗಳಿಂದ ಡಿಕ್ರಿ ಮೊಬಲಗನ್ನು ಕೈಗೆ ಪಡೆಯಲು ಅಥವಾ ವಸೂಲಿ ಮಾಡಿಕೊಳ್ಳಲು ಎರಡು ಬಾರಿ ಅರ್ಜಿಗಳನ್ನು ಸಲ್ಲಿಸಲು ಡಿಕ್ರಿಧಾರಕರು ಹಕ್ಕುಳ್ಳವರಾಗಿರುತ್ತಾರೆಂದು ಅಭಿಪ್ರಾಯಪಡಬಹುದಾಗಿರುತ್ತದೆ. ಇದರಂತೆ, ಜಾರಿ ನ್ಯಾಯಾಲಯವು ಅಳವಡಿಸಿಕೊಂಡ ಕಾರಣವು, ಪ್ರಧಾನ ಸಾಲಗಾರ ಹಾಗೂ ಖಾತರಿದಾರನ ವಿರುದ್ಧ ಡಿಕ್ರಿಧಾರಕನು ಸಲ್ಲಿಸಿದ ಎರಡು ಏಕರೂಪದ ಜಾರಿ ಅರ್ಜಿಗಳು ಊರ್ಜಿತವಾಗುವುದಿಲ್ಲವೆಂಬ ತೀರ್ಮಾನದಿಂದಾಗಲೀ ಇಲ್ಲವೇ ಎರಡು ಏಕರೂಪದ ಜಾರಿ ಅರ್ಜಿಗಳಲ್ಲಿ ಮಾಡಿದ ಕ್ಲೇಮು ಡಿಕ್ರಿ ಮೊಬಲಗನ್ನು ಮೀರದೆ, ಒಟ್ಟಿಗಿರುವುದು ಸಮರ್ಥನೀಯವಾಗಿರುವುದಿಲ್ಲವೆಂಬುದನ್ನು ಸ್ಪಷ್ಟೀಕರಿಸಿಕೊಳ್ಳುವುದರಿಂದ ಜಾರಿ ಅರ್ಜಿಗಳನ್ನು ತಿದ್ದುಪಡಿ ಮಾಡಲು ಡಿಕ್ರಿಧಾರಕರನ್ನು ನಿರ್ದೇಶಿಸುವುದರಿಂದಾಗಲೀ ಸುಸ್ಥಾಪಿತವಾಗುವುದಿಲ್ಲ.

22. ಊರ್ಜಿತವಾಗುವುದಿಲ್ಲವೆಂದು ಜಾರಿ ಅರ್ಜಿಗಳಾದ 1272/2014, 1275/2014 ಹಾಗೂ 1273/2014 ವಜಾ ಮಾಡಿ, ಜಾರಿ ನ್ಯಾಯಾಲಯವು ಸಮರ್ಥಿಸಿಕೊಳ್ಳದ ಜಂಟಿ ಹಾಗೂ ಹಲವಾರು ಡಿಕ್ರಿಗಳು, ತೀರ್ಪು ಋಣಿಗಳಿಂದ ಬರಬೇಕಾದ ಬಾಕಿ ಮೊಬಲಗನ್ನು ಕೈಗೆ ಪಡೆಯಲು ರಿಟ್ ಅರ್ಜಿ 32401/2015 ರಿಟ್ ಅರ್ಜಿ 32404/2015, ರಿಟ್ ಅರ್ಜಿ 32402/2015ರಲ್ಲಿ ಡಿಕ್ರಿಧಾರಕನು

ಏಕಕಾಲೀನ ಜಾರಿ ಅರ್ಜಿಗಳನ್ನು ಸಲ್ಲಿಸಿರುತ್ತಾನೆಂಬುದು ವಾಸ್ತವಾಂಶದ ಹಿನ್ನೆಲೆಯಾಗಿರುತ್ತದೆ.

23. ಮೇಲೆ ಹೇಳಿದ ಕಾರಣಗಳ ಹಿನ್ನೆಲೆಯಲ್ಲಿ, ನಾನು ಈ ಮುಂದಿನ ಆದೇಶವನ್ನು ಹೊರಡಿಸಲು ಮುಂದುವರೆಯುತ್ತೇನೆ.

## ಆಜ್ಞೆ

1. ರಿಟ್ ಅರ್ಜಿಗಳನ್ನು ಈ ಮೂಲಕ ಅಂಗೀಕರಿಸಲಾಗಿದೆ.

2. 1274/2014, 1276/2014, 1267/2014 ಹಾಗೂ 1268/2014ರ ಜಾರಿ ಅರ್ಜಿಗಳನ್ನು ತಿದ್ದುಪಡಿ ಮಾಡುವ ಡಿಕ್ರಿಧಾರಕನ ಕ್ಲೇಮನ್ನು ನಿರ್ದೇಶಿಸುವ ಮಟ್ಟಿಗೆ ಡಬ್ಲ್ಯೂ.ಪಿ.ಸಂ.32399/2015, ಡಬ್ಲ್ಯ.ಪಿ.ಸಂ.32400/2015, ಡಬ್ಲ್ಯ.ಪಿ.ಸಂ.32403/2015, ಡಬ್ಲ್ಯ.ಪಿ.ಸಂ.32405/2015 ರಲ್ಲಿನ ಪ್ರಶ್ನಿತ ಆದೇಶಗಳನ್ನು ಈ ಮೂಲಕ ರದ್ದುಪಡಿಸಲಾಗಿರುತ್ತದೆ. ಎರಡು ಪ್ರತ್ಯೇಕ ಡಿಕ್ರಿಗಳು ಹಾಗೂ ಜಾರಿ ಅರ್ಜಿಗಳನ್ನು ಪ್ರಧಾನ ಸಾಲಗಾರ ಹಾಗೂ ಖಾತರಿದಾರನ ವಿರುದ್ಧ ಸಲ್ಲಿಸಲಾಗಿದ್ದು, ಅಂಥ ಜಾರಿ ಅರ್ಜಿಗಳನ್ನು ಸಲ್ಲಿಸಿದಂತೆ ಊರ್ಜಿತವಾಗಿದ್ದು ಹಾಗೂ ಡಿಕ್ರಿಧಾರಕನು ತೀರ್ಪುಋಣಿಗಳ ವಿರುದ್ಧ ಮುಂದುವರೆಯಲು ಸ್ವತಂತ್ರನಾಗಿರುತ್ತಾನೆಂದು ಅಭಿಪ್ರಾಯಪಡಲಾಗಿರುತ್ತದೆ.

3. ರಿಟ್ ಅರ್ಜಿ ಸಂಖ್ಯೆ.32401/2015, ರಿಟ್ ಅರ್ಜಿ ಸಂಖ್ಯೆ.32402/2015 ಹಾಗೂ ರಿಟ್ ಅರ್ಜಿ ಸಂಖ್ಯೆ.32404/2015 ಇವುಗಳನ್ನು ಈ ಮೂಲಕ ಪುರಸ್ಕರಿಸಲಾಗಿರುತ್ತದೆ.

4. ಜಾರಿ ಅರ್ಜಿ ಸಂಖ್ಯೆ.1272/2014 1273/2014 ಹಾಗೂ 1275/2014 ಇವುಗಳನ್ನು ವಜಾಗೊಳಿಸಿ ಹೊರಡಿಸಿದ್ದ 29.04.2015ರ ಆದೇಶವನ್ನು ಈ ಮೂಲಕ ರದ್ದುಪಡಿಸಿ, ಸದರಿ ಜಾರಿ ಅರ್ಜಿಗಳು ಊರ್ಜಿತವಾಗಿವೆ ಹಾಗೂ ಡಿಕ್ರಿಧಾರಕನು, ಸ್ವತಂತ್ರ ಜಾರಿ ಅರ್ಜಿಯ ಮೂಲಕ ತೀರ್ಪು ಋಣಿಯ ವಿರುದ್ಧ ಏಕಕಾಲಕ್ಕೆ ಈ ಎಲ್ಲಾ ಜಾರಿ ಅರ್ಜಿಗಳನ್ನು ಪ್ರಾಸಿಕ್ಯೂಟ್ ಮಾಡಲು ಸ್ವತಂತ್ರನಾಗಿರುತ್ತಾನೆ. ಮೇಲೆ ಈಗಾಗಲೇ ಸೂಚಿಸಲಾದಂತೆ, ಡಿಕ್ರಿಧಾರಕನು, ಜಾರಿ ನಡಾವಳಿಯ ಸಮಯದಲ್ಲಿ ಯಾರೇ ತೀರ್ಪು ಋಣಿಯಿಂದಾಗಲೀ ಕೈಯಲ್ಲಿರುವ ಮೊಬಲಗನ್ನು ಬಹಿರಂಗಪಡಿಸಲು ಅದರಡಿಯಲ್ಲಿ ಕೈಗೊಂಡ ಪ್ರತಿಯೊಂದು ಜಾರಿ ಅರ್ಜಿಗಳಲ್ಲಿ ಮುಚ್ಚಳಿಕೆಯ ಅಫಿಡಾವಿಟ್ಟನ್ನು ಸಲ್ಲಿಸತಕ್ಕದ್ದು ಹಾಗೂ ಮುಚ್ಚಳಿಕೆಯ ಸದರಿ ಮುಚ್ಚಳಿಕೆಯ ಅಫಿಡಾವಿಟ್ಟನ್ನು ಜಾರಿ ನ್ಯಾಯಾಲಯದ ಮುಂದೆ ವಿಚಾರಣೆ ನಡೆಸಿದ ನಂತರದ ದಿನಾಂಕದಿಂದ ಸಲ್ಲಿಸತಕ್ಕದ್ದು. ಜಾರಿ ಅರ್ಜಿಗಳಿಗೆ ಸಂಬಂಧಿಸಿದಂತೆ ಯಾವುದೇ ಇತರೆ ಆಯಾಮಗಳಿಗೆ ಸಂಬಂಧಿಸಿದಂತೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿಲ್ಲವೆಂಬುದು ಸ್ಪಷ್ಟವಾಗಿದೆ.

---